

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT



ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119



Volume : 06 Issue : 235 Sunday 26-05-2024 E-mail : maruti.b.hosamani76@gmail.com Page: 4 Price : Rs. 1/-


## "ರುದ್ರಾಭಿಷೇಕಂ" ಚಲನಚಿತ್ರಕ್ಕೆ ಮುಹೂರ್ತ



**ಬೆಂಗಳೂರು :** ಫ್ಯಾನ್ ಇಂಡಿಯಾ ಕ್ರಿಯೇಷನ್ಸ್ ವಿಜಯಪುರವರ ಪ್ರಥಮ ಕಾಣಿಕೆ "ರುದ್ರಾಭಿಷೇಕಂ" ಕನ್ನಡ ಮತ್ತು ತೆಲುಗು ದ್ವಿಭಾಷೆಯಲ್ಲಿ ನಿರ್ಮಾಣವಾಗುತ್ತಿರುವ ಚಿತ್ರದ ಚಿತ್ರೀಕರಣದ ಮುಹೂರ್ತ ಸಮಾರಂಭ ಬೆಂಗಳೂರಿನಲ್ಲಿ ಅದ್ದೂರಿಯಾಗಿ ನೆರವೇರಿತು.

ಬಿವಿಕೆ ಗ್ರೂಫ್ ನ ಕೃಷ್ಣಪ್ಪನವರು ಕ್ಲಾಪ್ ಮಾಡಿದರೆ ವಿಜಯಪುರದ ಬಸವಕಲ್ಯಾಣ ಮಠದ ಶ್ರೀ ಮಾದೇವ ಶ್ರೀಗಳು ಕ್ಯಾಮರಾ ಗುಂಡಿ ಒತ್ತುವ ಮೂಲಕ ಮೊದಲ ದೃಶ್ಯಕ್ಕೆ ಚಾಲನೆ ನೀಡಿ–ದರು. ಈ ಸಂದರ್ಭದಲ್ಲಿ ದೊಡ್ಡ ಬಳ್ಳಾಪುರದ ನಿರಂಜನ ಶ್ರೀಗಳು, ಸಿದ್ದ ಗಂಗಾಮಠದ ನಿರಂಜನ ಶ್ರೀಗಳು, ಚಲನ ಚಿತ್ರರಂಗದ ಗಣ್ಯರು, ನಿರ್ಮಾಪಕರು, ಕಲಾವಿದರು, ತಂತ್ರಜ್ಞರು ಪಾಲ್ಗೊಂಡು ಚಿತ್ರ–ಕ್ಕೆ ಶುಭ ಕೋರಿದರು. ದಕ್ಷಿಣ ಭಾರತದ ಹೆಸರಾಂತ ಜನಪದ ಕಲೆಯನ್ನು ಒಳಗೊಂಡಿರುವ ಪ್ರಚಲಿತವಾಗಿರುವ ಕಥೆ ಇದು. ದೇವನಹಳ್ಳಿ ಸುತ್ತಮುತ್ತ, ನಂದಿಬೆಟ್ಟ, ಸಕಲೇಶಪುರ, ಮಲ್ಪೆಬೀಚ್ ಮೊದಲಾದ ಕಡೆ ಒಂದೇ ಹಂತದಲ್ಲಿ ಚಿತ್ರೀಕರಣ ನಡೆಯಲಿದೆ ಎಂದು ನಿರ್ದೇಶಕ ಕೆ.ವಸಂತ್ ಕುಮಾರ್ ತಿಳಿಸಿದರು.

ನಾಯಕ ನಟನಾಗಿ ಸನತ್, ಶ್ರೀದೇವಿ ಜೋಶಿ ನಾಯಕಿಯಾಗಿ, ಖಳನಾಯಕರುಗಳಾಗಿ ಬುಲೆಟ್ವಿನ್, ಮನು, ಮುಕುಂದ್, ವಿಜಯರಾಜ್ ಹಾಗೂ ವಿಶಿಷ್ಟ ಪಾತ್ರದಲ್ಲಿ ಖ್ಯಾತ ಜನಪದ ದಿಗ್ಗಜ ಗುರುರಾಜ್ ಹೊಸಕೋಟೆ ಇವರೊಂದಿಗೆ ಶಂಖನಾದ ಆಂಜಿನಪ್ಪ, ಬಿರಾದಾರ್, ಮಾಲತಿಶ್ರೀ, ಮಮತಾ, ಐಟಂ ಸಾಂಗ್ ನಾಯಕಿ ಎಂದೇ ಪ್ರಸಿದ್ಧಿ ವಾಗಿರುವ ಅಲೀಷಾ ಮೊದಲಾದವರು ಚಿತ್ರದಲ್ಲಿದ್ದಾರೆ.

ತಾಂತ್ರಿಕ ವರ್ಗದಲ್ಲಿ ಛಾಯಾಗ್ರಹಣ ಮುತ್ತುರಾಜ್, ವಿ.ಮನೋಹರ್ ಸಂಗೀತ ಚಿತ್ರಕ್ಕಿದ್ದು ಐದು ಗೀತೆಗಳಿಗೆ ರಾಗ ಸಂಯೋಜನೆ ಮಾಡಿದ್ದಾರೆ. ಸುರೇಶ್ ಗುಟ್ಟಹಳ್ಳಿ ನೃತ್ಯ ಸಂಯೋಜನೆ, ಬಾಬುಖಾನ್ ಕಲಾ ನಿರ್ದೇಶನ, ಮೇಕಪ್ ರಾಜ್, ವಸ್ತ್ರಾಲಂಕಾರ ವಿಜಯಕುಮಾರ್, ಸಂಕಲನ ಮುತ್ತುರಾಜ್ ಟಿ, ಪಿ ಆರ್ ಓ ಡಾ. ಪ್ರಭು. ಗಂಜಿಹಾಳ,ಡಾ.ವೀರೇಶ್ ಹಂಡಿಗಿ, ಸಹ ನಿರ್ದೇಶನ ಕಾಳಿದಾಸ ಅವರದಿದ್ದು, ಸುಮಾರು 25 ವರ್ಷಗಳ ಸಿನಿ ಪ್ರಯಾಣದಲ್ಲಿ ಹಲವಾರು ನಿರ್ದೇಶಕರುಗಳ ಜೊತೆ ಕಾರ್ಯ ನಿರ್ವಹಿಸಿದ ಕೆ ವಸಂತ್ ಕುಮಾರ್ ಅವರು ಮೊದಲಸಲ ಚಿತ್ರ ನಿರ್ದೇಶನಕ್ಕಿಳಿದು ಅದೃಷ್ಟ ಪರೀಕ್ಷೆಗೆ ಹೊರಟಿದ್ದಾರೆ,

ವಕೀಲರಾದ ಎನ್ ಜಯರಾಮ್, ಬಿ.ಎ .ರಮೇಶ್, ಕೆ. ವೆಂಕಟೇಶ್, ಶಿವು,ಚಿದಾನಂದಮೂರ್ತಿ ಹಾಗೂ ಅವರ ಸ್ನೇಹಿತರುಗಳು ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಈ ಚಿತ್ರದ ಐಟಂ ಸಾಂಗ್ ಬಹು ನಿರೀಕ್ಷೆಯಲ್ಲಿದ್ದು "ರುದ್ರಾಭಿಷೇಕಂ" ಚಿತ್ರದ ಚಿತ್ರೀಕರಣವನ್ನು ಆದಷ್ಟು ಬೇಗ ಮುಗಿಸಿ ತೆರೆಗೆ ತರುವ ಆಲೋಚನೆ ಚಿತ್ರ ತಂಡದ್ದಾಗಿದೆ.

**ವರದಿ : ಡಾ. ಪ್ರಭು ಗಂಜಿಹಾಳ**

**ಮೊ–9448775346**

## ಗಿರೀಶ್‌ರವರ ಹುಟ್ಟು ಕುರುಡುಗೆ ಚಿಕಿತ್ಸೆ ನೀಡಿದ: ನಾಟಿವೈದ್ಯ ರಾಜಭಕ್ಷಿ



**ಹೊಸಕೇರಿ :** ಶನಿವಾರ ದಿನವಾದ ಇಂದು ಜಗಳೂರು ತಾಲೂಕಾ ಹೊಸಕೇರಿ ಗ್ರಾಮದ ಜಾತಮ್ಮ ಎಂಬುವರ ಮಗ ಗಿರೀಶ್ (29) ಹುಟ್ಟಿನಿಂದಲೇ ದೃಷ್ಟಿ ಹೀನನಾಗಿದ್ದಾನೆ ಇವನಿಗೆ ಸುಮಾರು 7 ನೇ ಬಾರಿ ಕಣ್ಣಿಗೆ ನಾಟಿ ಔಷಧಿ ಬಿಟ್ಟಿದ್ದರಿಂದ ಸ್ವಲ್ಪ ದೊಡ್ಡ ಅಕ್ಷರಗಳ ಸುಳುವಿನ ದೃಷ್ಟಿ ಸಿಕ್ಕಿರುವುದು ತಾಯಿ ಜಾತಮ್ಮ ಮುಖದಲ್ಲಿ ಆತ್ಮವಿಶ್ವಾಸ ಜನರ ಆಸಕ್ತಿಯನ್ನು ಹೆಚ್ಚುವಂತೆ ಮಾಡಿದೆ.

ಸಾರ್ ನಾನು ಹುಟ್ಟಿ 29 ವರ್ಷಗಳಾಯ್ತು ನನಗೆ ಎರಡು ಕಣ್ಣಿನ ದೃಷ್ಟಿಯಿಲ್ಲ ದೃಷ್ಟಿ ಸಲುವಾಗಿ ಹಲವು ಖಾಸಗಿ ಕಣ್ಣಿನ ಆಸ್ಪತ್ರೆಗಳನ್ನು ನನ್ನ ತಾಯಿ ನನ್ನನ್ನು ಎಲ್ಲಾ ಕಡೆ ಕರೆದು ಕೊಂಡು ಹೋಗಿ ತೋರಿಸಿದ್ದಾರೆ ಎಲ್ಲಾ ಡಾಕ್ಟರ್ ಹೇಳಿದ್ದು ಮಾತ್ರ ಒಂದೇ ಉತ್ತರ ನಿಮ್ಮ ಮಗನ ಕಣ್ಣಿನ ನರಗಳು ಶಕ್ತಿ ಕಳೆದು ಕೊಂಡಿವೆ ಹಾಗಾಗಿ ನಾವು ಎಷ್ಟೆ ಪ್ರಯತ್ನ ಪಟ್ಟರು ಕಣ್ಣಿನ ದೃಷ್ಟಿ ಬರುವುದಿಲ್ಲ ಎಂದಿದ್ದರು. ನಂತರ ರಾಣೆಬೆನ್ನೂರುನಲ್ಲಿ ಯಾರೋ ನಾಟಿವೈದ್ಯರು ಕಣ್ಣಿಗೆ ಔಷಧಿ ಬಿಡ್ತಾರಂತೆ ಇದರಿಂದ ನನ್ನ ಕಣ್ಣಿನ ದೃಷ್ಟಿ ಸರಿ ಆಗಬಹುದು ಎಂದು ಬೇರೆಯವರಿಂದ ಸುದ್ದಿ ತಿಳಿದು. ರಾಣೆಬೆನ್ನೂರಿಗೆ ನನ್ನ ತಾಯಿ ಎರಡು ಬಾರಿ ನನ್ನನ್ನು ಕರೆದು ಕೊಂಡು ಹೋಗಿ ಕಣ್ಣಿನ ದೃಷ್ಟಿ ತೋರಿಸಿದೆವು ದೃಷ್ಟಿ ಬರುವ ಭರವಸೆ ದೇವರ ಮೇಲೆ ಭಾರ ಹಾಕಿ ನಮ್ಮ ಪ್ರಯತ್ನ ಮಾಡೋಣ ಎಂದು ನಾಟಿವೈದ್ಯ ರಾಜಭಕ್ಷಿ ಹೇಳಿದರು.

ನಾಟಿವೈದ್ಯ ರಾಜಭಕ್ಷಿ ಅವರಿಂದ ಇಲ್ಲಿಯವರೆಗೆ 7 ಬಾರಿ ಕಣ್ಣಿಗೆ ನಾಟಿ ಔಷಧಿ ಬಿಡಿಸಿ ಕೊಂಡಿದ್ದರಿಂದ ಈಗೀಗ ನನ್ನ ಕಣ್ಣಿನ ದೃಷ್ಟಿಯಲ್ಲಿ ದೊಡ್ಡ ಅಕ್ಷರದ ಸುಳಿವು ಸಿಗುತ್ತಿದೆ ಎಂದು ರೋಗಿ ಗಿರೀಶ್ ರವರು ತಮ್ಮ ಖುಷಿಯನ್ನು ವೈದ್ಯರೊಂದಿಗೆ ಹಂಚಿಕೊಂಡರು.

ರಾಜಭಕ್ಷಿ ನಾಟಿವೈದ್ಯರು ಮಾತನಾಡಿ ನಾಟಿ ಔಷಧಿಯಿಂದ ಆರೋಗ್ಯಕ್ಕೆ ಹಾಗೂ ಕಣ್ಣುಗಳಿಗೆ ಯಾವುದೇ ಅನ್ಯ ತೊಂದರೆಗಳಿಗೆ ಕಾರಣವಾಗುವುದಿಲ್ಲ , ಸುಗರ್, ಬಿ.ಪಿ. ಕಾಯಿಲೆ ಉಳ್ಳವರು ಕೂಡ ಕಣ್ಣಿಗೆ ಔಷಧಿ ಪಡೆಯಬಹುದು ಅದರಿಂದ ಅವರಿಗೆ ಯಾವುದೇ ತೊಂದರೆ ಆಗುವುದಿಲ್ಲ ಇಂಗ್ಲಿಷ್ ಮೆಡಿಸಿನ್ ತೆಗೆದು ಕೊಂಡವರು ಸಹ ಈ ನಾಟಿ ಔಷಧಿ ಕಣ್ಣಿಗೆ ಹಾಕಿಸಿ ಕೊಳ್ಳಬಹುದು, ಮೊಣಕಾಲು, ಮೈ ಕೈ ನೋವು, ಕಣ್ಣಿಗೆ ಸಂಬಂಧಿಸಿದಂತೆ ಯಾವುದೇ ಸಮಸ್ಯೆ ಇದ್ದರು ನಿವಾರಣೆ ಮಾಡುವ ಪ್ರಯತ್ನ ಮಾಡುತ್ತೇನೆ. ಏನಿದ್ದರೂ ಸೇವೆ ಮಾತ್ರ ನಮ್ಮದು ಫಲಾಪೇಕ್ಷೆ ದೇವರಿಗೆ ಬಿಟ್ಟಿದ್ದು ಎಂದರು ಒಬ್ಬ 12 ವರ್ಷದ ಬಾಲಕಿ ಕಣ್ಣಿನಲ್ಲಿ ಹೂ ಕುಂತು ಸರಿಯಾಗಿ ಕಣ್ಣು ಕಾಣುತ್ತಿರಲಿಲ್ಲ ಒಂದು ಗುರುವಾರ ಮಾತ್ರ ಕೊಟ್ಟೂರು ಪಟ್ಟಣದಲ್ಲೆ ನಾಟಿ ಔಷಧಿ ತೆಗೆದು ಕೊಂಡಿದ್ದಾರೆ ಈಗ ಆ ಬಾಲಕಿಗೆ ಕಣ್ಣುಗುಡ್ಡಿ ಮೇಲಿರುವ ಬಿಳಿಪೊರೆ (ಹೂ) ಕರಿ ಗುಡ್ಡಿಯಿಂದ ಬೇರ್ಪಟ್ಟ ಲಕ್ಷಣಗಳು ಕಂಡು ಬಂದಿದೆ ಎಂದು ಬಾಲಕಿ ತಂದೆ ನನಗೆ ಫೋನ್ ಮಾಡಿ ಹೇಳಿದ್ದಾರೆ ಎಂದ ನಾಟಿವೈದ್ಯ.

ಜನರ ಆಸಕ್ತಿ ಹೆಚ್ಚಾಗಿರುವ ಕಾರಣ ಪ್ರತಿ ಗುರುವಾರ ಕೊಟ್ಟೂರು ಪಟ್ಟಣದ ಹರಪನಹಳ್ಳಿ ರಸ್ತೆ 108 ಶಿವಲಿಂಗ ದೇವಸ್ಥಾನ ಹತ್ತಿರ ಇರುವ ಅಂಜಿನೇಯ ದೇವಸ್ಥಾನ ಬಳಿ ಬೆಳಿಗ್ಗೆ 9 ಗಂಟೆಯಿಂದ 12 ಗಂಟೆವರೆಗೆ ಕಣ್ಣಿಗೆ ನಾಟಿ ಔಷಧಿ ಬಿಡಲಾಗುವುದು ಇಂದು ಸುಮಾರು 70 ಕ್ಕೂ ಹೆಚ್ಚಿನ ಜನರು ಇದರ ಸದುಪಯೋಗ ಪಡೆದು ಕೊಂಡಿದ್ದಾರೆ.

**ತಾಲೂಕ ವರದಿಗಾರರು ಹಾಗೂ ಎಸ್. ಕೆ ನ್ಯೂಸ್ ಕನ್ನಡ ಚಾನಲ್: ಪ್ರದೀಪ್. ಕುಮಾರ್. ಸಿ. ಕೊಟ್ಟೂರು.**

## ಸಾತಿಹಾಳದಲ್ಲಿ ಉಚಿತ ಕೋಳಿ ತರಬೇತಿ ಕಾರ್ಯಕ್ರಮ



**ಸಾತಿಹಾಳ :** ದೇವರ ಹಿಪ್ಪರಗಿ ತಾಲೂಕಿನ ಸಾತಿಹಾಳ ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘದ ಬ್ಯಾಂಕ್ ಹಾಗೂ ನಬಾರ್ಡ್ ಸಂಯೋಗದಲ್ಲಿ ಗ್ರಾಮದಲ್ಲಿನ 30 ಜನ ಮಹಿಳೆಯರಿಗೆ ಉಚಿತ ಕೋಳಿ ಸಾಕಾಣಿಕೆ ತರಬೇತಿ ನೀಡಲಾಯಿತು. ಈ ಕೋಳಿ ಸಾಕಾಣಿಕೆ ತರಬೇತಿ ಯಿಂದ ಮಹಿಳೆಯರಿಗೆ ಅನುಕೂಲ ಮಾಡಿ ಕೊಡುತ್ತದೆ ಎಂದು ಹೇಳಿದರು, ಶ್ರೀ ವಿಕಾಸ ರಾಠೋಡ ಎಜಿಎಮ್ ನಬಾರ್ಡ್ ಬೆಂಗಳೂರು,

ಶ್ರೀ ಜಿ ಎಮ್ ಬಿರಾದಾರ ಕಾರ್‌ರಸ್ ಎನ್ ಜಿ ಓ ವಿಜಯಪುರ, ಶ್ರೀ ರಾಮಪ್ಪ ಪೂಜಾರಿ ಗ್ರಾಮೀಣ ಫಾರ್ಮಸಿ ಕಂಪನಿ ಎಸರ್ಪೋಟ್ ಶ್ರೀ ಚನ್ನುಗೌಡ ಪಾಟೀಲ ಅಧ್ಯಕ್ಷರು ಕೃಷಿ ಪತ್ತಿನ ಸಹಕಾರ ಸಂಘದ ಸಾತಿಹಾಳ ಶ್ರೀನರಸಪ್ಪ ಬಸಪ್ಪ ಭಜಂತ್ರಿ ಕೃಷಿ ಪತ್ತಿನ ಸಹಕಾರ ಸಂಘದ ಮ್ಯಾನೇಜರ ಶ್ರೀ ಸಂತೋಷ ಸಾಸಟ್ಟಿ ಪಿಕೆಪಿಎಸ್ ಸದ್ಯಸರು ,ಶ್ರೀ ಪರಸು ಚವ್ಹಾಣ ಶ್ರೀ ಶಾಂತು ರೊಳ್ಳಿ ಶ್ರೀ ರಾಮು ರಾಠೋಡ ಶ್ರೀ ಕುಮಾರ ರಾಠೋಡ ಶ್ರೀ ಜಟ್ಟಪ್ಪ ಕರ್ನಾಳ ಹಾಗೂ ಗ್ರಾಮದ ಮಹಿಳೆಯರು ಕಾರ್ಯಕ್ರಮ ಹಾಗೂ ತರಬೇತಿಯಲ್ಲಿ ಉಪಸ್ಥಿತರಿದ್ದರು.

**ತಾಲೂಕ ವರದಿಗಾರರು ಹಾಗೂ ಎಸ್. ಕೆ ನ್ಯೂಸ್ ಕನ್ನಡ ಚಾನಲ್: ಭೀಮಪ್ಪ ಹಚ್ಯಾಳ. ದೇವರ ಹಿಪ್ಪರಗಿ.**

## ಹೂಡೇಂ ಕಂಪಳ ರಂಗ ಸ್ವಾಮಿ ಪ್ರೌಢ ಶಾಲೆಯಲ್ಲಿ ಕಲಿಕಾಸರೆ ಪುಸ್ತಕ ವಿತರಣೆ



**ಹೂಡೇಂ :** ಕೂಡ್ಲಿಗಿ ತಾಲೂಕಿನ ಹೂಡೇಂ ಗ್ರಾಮದ ಶ್ರೀ ಕಂಪಳ ರಂಗ ಸ್ವಾಮಿ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರತಿಭಾ ಅಂಕಗಳು ಗಳಿಸಲು ಕಲಿಕಾಸರೆ ಪುಸ್ತಕ ವಿತರಣಾ ಸಮಾರಂಭ ನಡೆಯಿತು. ಇಲ್ಲಿನ ಅರಿವು ಕೇಂದ್ರ ಗ್ರಾಮ ಪಂಚಾಯಿತಿ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರ ಹೂಡೇಂ, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಕಲಬುರ್ಗಿ ಹಾಗೂ ಶಾಲಾ ಶಿಕ್ಷಣ ಇಲಾಖೆ ಅಪರ ಆಯುಕ್ತರ ಕಾರ್ಯಾಲಯ ಇವರಿಂದ ಸರಬರಾಜು ಅಕ್ಷರ ಆವಿಷ್ಕಾರ ಕಲಿಕಾಸರೆ ಪುಸ್ತಕಗಳನ್ನು ವಿದ್ಯಾರ್ಥಿಗಳು ಸದ್ಬಳಕೆಗೆ ಮಾಡಿಕೊಂಡು ಹಾಗೂ ಶಾಲೆಯ ಮುಖ್ಯ ಗುರುಗಳು, ಶಿಕ್ಷಕ ವೃಂದದವರು ಮಕ್ಕಳಿಗೆ ಪಠ್ಯ ಪುಸ್ತಕದ ಬೋಧನೆ ಮಾಡಿ ಅವರ ಪರಿಶ್ರಮ ದಿಂದ ಈ ವರ್ಷ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ವಿದ್ಯಾರ್ಥಿನಿ ಕೆ ಟಿ ಸಿಂಚನ ಪ್ರೌಢಶಾಲೆಗೆ 518 ಅಂಕಗಳನ್ನು ಗಳಿಸಿ ಶಾಲೆಗೆ ಪ್ರಥಮ ಸ್ಥಾನ ಪಡೆದಿರುತ್ತಾರೆ. ಹಾಗೂ ವಿದ್ಯಾರ್ಥಿನಿ ನಂದಿನಿ ಕನ್ನಡ ವಿಷಯದಲ್ಲಿ 125ಕ್ಕೆ 125 ಅಂಕಗಳನ್ನು ಪಡೆದಿದ್ದಾಳೆ 507 ಅಂಕಗಳನ್ನು ಪಡೆದು ಶಾಲೆಗೆ ದ್ವಿತೀಯ ಸ್ಥಾನ ಪಡೆದಿರುತ್ತಾರೆ. ಮತ್ತು ವಿದ್ಯಾರ್ಥಿ ಎಂ ಎಂ ಸುದೀಪ 501 ಅಂಕಗಳನ್ನು ಪಡೆದು ಶಾಲೆಗೆ ಮೂರನೇ ಸ್ಥಾನ ಪಡೆದಿರುತ್ತಾನೆ. ಇವರಿಗೆ ಶಾಲಾ ಆಡಳಿತ ಮಂಡಳಿಯವರು ಮುಖ್ಯ ಶಿಕ್ಷಕರು ಸಹ ಶಿಕ್ಷಕರು ಹಾಗೂ ಬೋಧ–ಕೇತರ ಸಿಬ್ಬಂದಿ ಅವರಿಂದ ಹಾಗೂ ಅರಿವು ಕೇಂದ್ರ ಗ್ರಂಥಾಲಯ ಸದ್ಬಳಕೆ ಮಾಡಿ ಕೊಂಡಿದ್ದ ಮಕ್ಕಳಿಗೆ ಗ್ರಂಥಾಲಯ ಮೇಲ್ವಿಚಾರಕರು ಟಿ ಗುರುರಾಜ್ ಇವರಿಂದ ಹಾಗೂ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಹಾಗೂ ಸರ್ವ ಸದಸ್ಯರು ಆಡಳಿತ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಂದ ಹಾಗೂ ಊರಿನ ಗ್ರಾಮಸ್ಥರಿಂದ ಈ ಮಕ್ಕಳಿಗೆ ತುಂಬು ಹೃದಯದ ಧನ್ಯವಾದಗಳು ತಿಳಿಸಿದ್ದಾರೆ.

**ಹೋಬಳಿ ವರದಿಗಾರರು ಹಾಗೂ ಎಸ್. ಕೆ ನ್ಯೂಸ್ ಕನ್ನಡ ಚಾನಲ್: ಕೆ.ಎಸ್. ವೀರೇಶ್. ಕಾನಾ ಹೊಸಹಳ್ಳಿ.**

## ಹಿಂದೂ–ಮುಸ್ಲಿಂ ಭಾವೈಕ್ಯತೆಗೆ ಸಾಕ್ಷಿಯಾದ ಭತ್ತದನಾಡು ಗಂಗಾವತಿ: ಅರ್ಚಕ ಶ್ರೀನಿವಾಸಸ್ವಾಮಿಗೆ ಮುಸ್ಲಿಂ ಯುವಕನಿಂದ ರಕ್ತದಾನ



**ಕೊಪ್ಪಳ :** ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಐತಿಹಾಸಿಕ ಪ್ರಸಿದ್ಧ ಹನುಮನ ನಾಡು ಆಂಜನಾದ್ರಿ ಬೆಟ್ಟದ ಮುಖ್ಯ ಅರ್ಚಕರಾದ ಶ್ರೀನಿವಾಸಸ್ವಾಮಿ ಯವರಿಗೆ ಮುಸ್ಲಿಂ ಯುವಕನಿಂದ ರಕ್ತದಾನ ಮಾಡಿ ಜೀವ ಉಳಿಸುವಂತ ಕೆಲಸ ಮಾಡುವದರ ಜೊತೆಗೆ ಹಿಂದೂ ಮುಸ್ಲಿಂ ಭಾವೈಕ್ಯತೆಗೆ ಸಾಕ್ಷಿಯಾದ ಭತ್ತದನಾಡು ಗಂಗಾವತಿಯಲ್ಲಿ ಜರುಗಿದ ಈ ಕಾರ್ಯ ಎಲ್ಲರ ಪ್ರಶಂಸೆಗೆ ಪಾತ್ರವಾಗಿದೆ.

ಅನಾರೋಗ್ಯದಿಂದ ಬಳಲುತ್ತಿದ್ದ ಆಂಜನಾದ್ರಿ ಬೆಟ್ಟ ದೇವಸ್ಥಾದ ಅರ್ಚಕ ಶ್ರೀನಿವಾಸಸ್ವಾಮಿ ಯವರಿಗೆ ರಕ್ತದ ಅವಶ್ಯಕತೆ ಇದೆ–ಎಂದು ವೈದ್ಯರು ತಿಳಿಸಿದಾಗ ಆದೆ ನಗರದ 19 ನೇ ವಾರ್ಡಿನ ಪಿಂಜಾರ ಓಣಿಯ ನಿವಾಸಿ ಪಕ್ಕದ ಕಂಪ್ಲಿ ಪಟ್ಟಣದ ಅಲಿ ಪಬ್ಲಿಕ್ ಆಂಗ್ಲ ಮಾಧ್ಯಮ ಶಾಲೆಯ ಮುಖ್ಯ ಶಿಕ್ಷಕ ಯುವ ಮೈನುದ್ದೀನ ಕರ್ನೂಲ ಎಂಬುವರು ತನ್ನ ರಕ್ತದಾನ ಮಾಡಿ ರಕ್ತದಾನ ಶ್ರೇಷ್ಠ ದಾನ ಎಂದು ಸಾಬಿತು ಮಾಡಿದಿರುವದಲ್ಲದೆ ಮಾನವಿಯತೆ ಮೇರದಿದ್ದಾರೆ. ಮಾನವಿಯತೆಗಿಂತ ದೊಡ್ಡ ಧರ್ಮ ಇನ್ನೊಂದು ಇಲ್ಲಅಂತ ಮತ್ತೊಮ್ಮೆ ಸಾಬಿತು ಆಗಿದಂತಾಗಿದೆ. ಎಂದು ಹಲವಾರು ಈ ಕಾರ್ಯಕ್ಕೆ ಆಪಾರ ಮೆಚ್ಚುಗೆ ವೆಕ್ತಪಡಿಸಿದ್ದಾರೆ.

## ಪ್ರತಿಭಾವಂತ ಮಕ್ಕಳಿಗೆ ಸನ್ಮಾನ



**ಮಹಾಲಿಂಗಪುರ :** ಸಮೀಪದ ಸೈದಾಪುರದ ಸೋಮಯ್ಯ ವಿನಯ ಮಂದಿರ ಪ್ರೌಢಶಾಲೆಗೆ ಎಸ್‌ಎಸ್‌ಎಲ್‌ಸಿಯಲ್ಲಿ ಪ್ರಥಮ ಸ್ಥಾನ ಪಡೆದ ಬಾಬರಾಜರಾಜು ಐಹೊಳೆ, ದ್ವಿತೀಯ ಸ್ಥಾನ ಪಡೆದ ಮುಫೀಜಾ ಶೇಖ, ತೃತೀಯ ಸ್ಥಾನ ಪಡೆದ ಗಂಗಪ್ಪ ಉಳ್ಳಾಗಡ್ಡಿ ಅವರನ್ನು ಬಿಜೆಪಿ ಮುಖಂಡರ ವತಿಯಿಂದ ಸನ್ಮಾನಿಸಲಾಯಿತು.

ಪಕ್ಷದ ಹಿಂದುಳಿದ ವರ್ಗಗಳ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹಾಲಿಂಗಪ್ಪ ಸನದಿ, ವಿಶಾಲ ತೆಗ್ಗಲಗಿ,ಶಿವಾನಂದ ಕುರಿ, ಲಚ್ಚಪ್ಪ ಲಮಾಣಿ,ಅಶೋಕ ನೀಲಣ್ಣವರ,ಸಾಗರ ಉಳ್ಳಾಗಡ್ಡಿ,ಮೋಹನ ಕುರಿ, ಅನಿಲ ಚಿಂಚಲಿ,ಅರ್ಜುನ ಅಂಕೋಶಿ,ಸುರೇಶ ಲಮಾಣಿ,ಬಸವರಾಜ ಸವದತ್ತಿ,ಬೀರಪ್ಪ ಮಾಕಳಿ,ರಾಜು ಹರಿಜನ,ಕಲ್ಮೇಶ ಸಾಲೋಡಗಿ ಇತರರು ಇದ್ದರು.

## ಭೀಕರ ಮಳೆಗೆ ಭಕ್ತರ ಪರದಾಟ



**ಚಿಮ್ಮಡ :** ಮಂಗಳವಾರ ರಾತ್ರಿ ಸುರಿದ ಜೋರು ಮಳೆಯಿಂದ ಈ ಭಾಗದ ವಾತಾವರಣ ತಂಪೆರೆದಂತಾಗಿದ್ದು ರೈತರು ಹರ್ಷವ್ಯಕ್ತಪಡಿಸಿದ್ದಾರೆ. ಆದರೆ ಗ್ರಾಮದಲ್ಲಿ ನಡೆಯುತ್ತಿರುವ ಮೂರು ಮುಖದವ್ವದೇವಿ ಜಾತ್ರೆಗೆ ಆಗಮಿಸಿದ ಭಕ್ತರು ಹೈರಾಣಾಗಿದ್ದಾರೆ.

ರಾತ್ರಿ 8.00ಘಂ. ಯಿಂದ ಸುಮಾರು 3 ಘಂ.ಗಳ ಕಾಲ ಸುರಿದ ಮಳೆಯಿಂದಾಗಿ ಗ್ರಾಮದಲ್ಲಿ ಮೂರು ವರ್ಷಗಳಿಗೊಮ್ಮೆ ನಡೆಯುವ ಬ್ರಹತ್ ಜಾತ್ರೆ ಅಸ್ತವ್ಯಸಥಗೊಂಡಿದೆ, ಎತ್ತಿನಬಂಡಿ, ಟ್ರ್ಯಾಕ್ಟರ್ ಮುಂತಾದ ವಾಹನಗಳಲ್ಲಿ ಅಡುಗೆ ಸಾಮಗ್ರಿಗಳೊಂದಿಗೆ ಆಗಮಿಸಿದ ಸಾವಿರಾರು ಜನ ಭಕ್ತಾಧಿಗಳು ಈ ಅಕಾಲಿಕ ಮಳೆಯಿಂದ ಪರಿತಪಿಸುವಂತಾಯಿತು. ಅವರ ವಸತಿಗಾಗಿ ಹಾಕಿದ ಶಾಮಿಯಾಣ ಕಿತ್ತು ಹೋದ ಪರಿಣಾಮ ಭಕ್ತರು ಶಾಲೆ, ಮಠ, ಮಂದಿರಗಳಲ್ಲಿ ಆಶ್ರಯ ಪಡೆದರು, ರಾತ್ರಿಯಿಡೀ ವಿದ್ಯುತ್ ಸಂಪರ್ಕ ಕಡಿತಗೊಂಡಿದ್ದರಿಂದ ಸೊಳ್ಳೆಗಳ ಕಾಟದಿದಾಗಿ ಗ್ರಾಮಸ್ಥರು ಜಾಗರಣೆ ಮಾಡುವಂತಾಯಿತು,

ಆದರೆ ವ್ಯಾಪಾರಿಗರು ನಮಗೆ ಹಾನಿಯಾದರೂ ಪರವಾಗಿಲ್ಲ ಮಳೆಯಾಗಿದ್ದು ತುಂಬಾ ಖುಷಿಯಾಗಿದೆ, ಮೂರುಮಕದವ್ವ ಈ ಮಳೆ ಮೂಲಕ ನಮಗೆಲ್ಲ ಆಶೀರ್ವದಿಸಿದ್ದಾರೆಂದು ವ್ಯಾಪಾರಿ ಮಂಜುನಾಥ ತೊರವಿ ಅಭಿಪ್ರಾಯ ವ್ಯಕ್ತಪಡಿಸಿದರು. ಕಳೆದ ಹಲವು ದಿನಗಳಿಂದ ಈ ಭಾಗದಲ್ಲಿ ಮಳೆಯಿಲ್ಲದೇ ಹಲವಾರು ಕೊಳವೆ ಬಾವಿಗಳು ಕೈಕೊಟ್ಟಿದ್ದರ ಪರಿಣಾಮ ಈ ಭಾಗದಲ್ಲಿ ಹಲವೆಡೆ ಜನ ಜಾನುವಾರುಗಳಿಗೆ ಕುಡಿಯುವ ನೀರಿಗಾಗಿ ಪರದಾಡುವಂತಾಗಿತ್ತು ರಾತ್ರಿ ಸುರಿದ ಮಳೆಯಿಂದ ವಾತಾವರಣ ತಂಪಾಗಿದ್ದು ಅಂತರ್ಜಲ ಮಟ್ಟ ಹೆಚ್ಚುವ ಸಾಧ್ಯತೆಯಿದೆಯಂದು ಹಲವಾರು ರೈತರು ಅಭಿಪ್ರಾಯ ಪಡುತ್ತಾರೆ. ಒಟ್ಟಾರೆ ಈ ಭಾಗದಲ್ಲಿ ಸುರಿದ ಕೃತಿಕಾ ಮಳೆಗೆ ಸಾರ್ವಜನಿಕರು ರೈತರು ಖುಷಿಯಾಗಿದ್ದು ತಮ್ಮ ಬಿತ್ತನೆ ಕಾರ್ಯಕ್ಕೆ ಭುಮಿಯನ್ನು ಹದಗೊಳಿಸಿಮಳೆಗಾಗಿಕಾಯುತಿದ್ದರೈತರಿಗೆ ಈ ಮಳೆ ವರದಾನವಾಗಿದೆ.

# ನ್ಯಾಯಾಧೀಶರಿಗೆ ಕಾವ್ಯ ಬೀಳ್ಕೊಡುಗೆ

## ಸೊನ್ನೆಯಿಂದಲೇ ಪರಿಶ್ರಮಿಸಿ ಆರಂಭಿಸಿದ ಕಾರ್ಯ ನೂರಕ್ಕೆ ನೂರು ಯಶಸ್ವಿ ನ್ಯಾ.ಕುಂದರ್



**ವಿಜಯಪುರ:**ಸೊನ್ನೆಯಿಂದಲೇಪರಿಶ್ರಮಿಸಿ ಆರಂಭಿಸಿದ ಕಾರ್ಯ ನೂರಕ್ಕೆ ನೂರು ಯಶಸ್ವಿ ಆಗಲು ಸಾಧ್ಯವಾಗುತ್ತದೆ ಎಂದು ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನುನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ನ್ಯಾಯಾಧೀಶ ಸಂತೋಷ ಎಸ್ ಕುಂದರ್ ಅವರು ಹೇಳಿದರು.

ನ್ಯಾಯಾಧೀಶರಾದ ಕುಂದರ ಅವರು ವರ್ಗಾವಣೆ ಆಗಿರುವ ನಿಮಿತ್ಯ ಅವರಿಗೆ ಇಲ್ಲಿನ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಪ್ರೊಬೊನೊ,ಪೆನಲ್, ಡಿಫೆನ್ಸ್ ಕೌಂಸಿಲ್,ಮದ್ಯಸ್ಥಗಾರ ವಕೀಲರು ಇವರುಗಳ ಸಂಯುಕ್ತ ಆಶ್ರಯದಲ್ಲಿ ಕಾನೂನು ಸೇವಾ ಪ್ರಾಧಿಕಾರದ ಸಭಾಂಗಣದಲ್ಲಿ ಏರ್ಪಡಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಕಾವ್ಯಾರ್ಪಣೆ ಮತ್ತು ಸನ್ಮಾನ ಸ್ವೀಕರಿಸಿ ಮಾತನಾಡುತ್ತಿದ್ದರು.

ಸಮಾಜದಲ್ಲಿರುವ ವಿವಿಧ ಕಾಯಕ ನಿರತರು ತಮ್ಮ ಕಾರ್ಯವನ್ನು ಪ್ರಮಾಣಿಕವಾಗಿ ನೂರಕ್ಕೆ ನೂರರಷ್ಟು ಅದರಲ್ಲೇ ತಲ್ಲೀನರಾಗಿ ಶ್ರಮಿಸಿದರೆ ಯಶಸ್ಸು ಹುಡುಕಿಕೊಂಡು ಬರುತ್ತದೆ, ನಾವು ಮಾಡುವ ಕೆಲಸ ಸಮಾಜಕ್ಕೆ ದಾರಿ ದೀಪವಾಗಬೇಕು ಎಂದ ಅವರು ವಿಜಯಪುರದ ಜನರ ಹೃದಯ ವಿಶಾಲತೆ ಮೆಚ್ಚುವಂತಹದ್ದು, ಇಲ್ಲಿಯ ಉತ್ತಮ ಸಂಸ್ಕಾರ ಶ್ಲಾಘನಿಯ ಎಂದು ಬಣ್ಣಿಸಿದ ಅವರು ವಿಜಯಪುರ ಜಿಲ್ಲಾ ಕಾನೂನು ಸೇವ ಪ್ರಾಧಿಕಾರಕ್ಕೆ ಪ್ರೊಬೊನೊ ವಕಿಲರನ್ನು ಅಂದರೆ ಯಾವುದೇ ಗೌರವಧನವಿಲ್ಲದೇ ಉಚಿತವಾಗಿ ಕಾನೂನು ಸೇವೆ ಮಾಡುವ ಜನಸ್ನೇಹಿ[ಪ್ರೊಬೊನೊ] ವಕೀಲರನ್ನು ನನ್ನ ಕಾರ್ಯಾವಧಿಯಲ್ಲಿ ನೇಮಿಸಿದ್ದು, ಅದರಲ್ಲೂ ಹಿರಿಯ ನ್ಯಾಯವಾದಿ ಮಲ್ಲಿಕಾರ್ಜುನ ಭೃಂಗಿಮಠ ಅವರು ಜಿಲ್ಲೆಯಲ್ಲಿ ಪ್ರಥಮವಾಗಿ ಪ್ರೊಬೊನೊ ವಕೀಲರಾಗಿ ನೇಮಕವಾದ ವಕೀಲರಾಗಿದ್ದಾರೆ. ಅಲ್ಲದೇ ಇತರೇ ಇಬ್ಬರನ್ನು ಸಹ ನೇಮಿಸಲಾಗಿದ್ದು, ರಾಜ್ಯ ಕಾನೂನು ಸೇವಾ ಪ್ರಾಧಿಕಾರದಿಂದ ನೇಮಕಾತಿ ಮಾನ್ಯವಾಗಿದ್ದು ವಿಶೇಷವಾಗಿದೆ ಎಂದ ಅವರು ಜಿಲ್ಲೆಯಲ್ಲಿ ಕಾನೂನು ಸೇವಾ ಪ್ರಾಧಿಕಾರ ಜನಸ್ನೇಹಿ ಆಗಿ ಕಾರ್ಯ ನಿರ್ವಹಿಸಿದ್ದು ಜನರು ಸಹ ಉತ್ತಮ ಸಹಕಾರ ನೀಡಿದ್ದಾರೆ ಎಂದ ಅವರು ವಿಜಯಪುರ ಜಿಲ್ಲೆಯ ವಕೀಲರ ವಾದ ಮಂಡನೆ ಪ್ರಕರಣ ನಡೆಸುವ ಕಾರ್ಯ ವೈಖರಿ ಸಹ ಉತ್ತಮವಾಗಿತ್ತು ಎಂದರು.

ಇನ್ನೋರ್ವ ಹಿರಿಯ ಶ್ರೇಣಿ ನ್ಯಾಯಾಧೀಶೆ ಶ್ರೀಮತಿ ಕೆ ಉಮಾ ಅವರು ಸನ್ಮಾನ ಸ್ವೀಕರಿಸಿ ಮಾತನಾಡಿ, ವಿಜಯಪುರಕ್ಕೆ ಬರುವಾಗ ಇಲ್ಲಿನ ಭಾಷೆ ಮತ್ತು ಜನರ ಕುರಿತು ಸ್ವಲ್ಪ ಆತಂಕ ಮನದಲ್ಲಿತ್ತು ಆದರೆ ಇಲ್ಲಿ ಬಂದು ಮೂರು ವರ್ಷ ಸೇವೆ ಸಲ್ಲಿಸಿದ ನಂತರ ಇಲ್ಲಿನ ಜನರಲ್ಲಿ ನ್ಯಾಯದ ಬಗ್ಗೆ ನ್ಯಾಯಾಲಯದ ಬಗ್ಗೆ ಇರುವ ಗೌರವ ಹೆಮ್ಮೆ ಕಂಡು ನಮಗೆ ಇನ್ನು ಉತ್ತಮವಾಗಿ ಕೆಲಸ ಮಾಡಲು ಸಾಧ್ಯವಾಯಿತು, ವಿಜಯಪುರದಲ್ಲಿ ಕ್ರಿಯಾಶೀಲ ಮತ್ತು ಪರಿಶ್ರಮ ಮಾಡುವ ವಕೀಲರಿದ್ದು, ಅವರ ಸೇವೆ ಜನರು ಪಡೆದುಕೊಂಡು ಶೀಘ್ರ ನ್ಯಾಯ ಪಡೆದುಕೊಳ್ಳುತ್ತಿರುವುದು ಸಂತೋಷಕರ ಸಂಗತಿ ಎಂದರು. ಕಾನೂನಿಗೆ ಯಾರು ಗೌರವಿಸುತ್ತಾರೋ ಅವರಿಗೆ ಕಾನೂನು ಗೌರವಿಸುತ್ತದೆ ಎಂದರು.

ಹಿರಿಯ ಪ್ರೊಬೋನೋ ನ್ಯಾಯವಾದಿ ಮಲ್ಲಿಕಾರ್ಜುನ ಜಿ ಭೃಂಗಿಮಠ ಅವರು ಕಾವ್ಯಭಾಷೆಯಲ್ಲೇ ಮಾತನಾಡಿ, ನ್ಯಾಯಾಧೀಶರಾದ ಕುಂದರ ಅವರು ಜಿಲ್ಲೆಯಲ್ಲಿ ಆಡದೇ ಕೆಲಸ ಮಾಡಿ ತೋರಿಸಿದ ಸಾಧಕರು, ಅವರ ಅವಧಿಯಲ್ಲಿ ಪ್ರಾಧಿಕಾರವು ಜನರಿಗೆ ಕಾನೂನು ಅರಿವು ನೆರವು ನೀಡುವುದರ ಜೊತೆಗೆ ಅಲ್ಲಲ್ಲಿ ಇದ್ದ ಸಾಮಾಜಿಕ ಸಮಸ್ಯೆಗಳನ್ನು ಬಗೆ ಹರಿಸುವಲ್ಲಿ ಉತ್ತಮ ಕೆಲಸ ಮಾಡಿದ್ದಾರೆ. ವಿಜಯಪುರ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಇತಿಹಾಸದಲ್ಲೇ ಪ್ರೊಬೋನೋ ವಕೀಲರನ್ನು ನೇಮಿಸಲು ಕಾರಣಿಗರಾದ ಕೀರ್ತಿ ಇವರ ಅವಧಿಗೆ ಸಲ್ಲುತ್ತದೆ.

ಅವರ ಅವಧಿಯಲ್ಲಿ ವಿಜಯಪುರ ಜಿಲ್ಲೆ ಪ್ರಾಧಿಕಾರವು ರಾಜ್ಯಕ್ಕೆ 4ನೇ ಸ್ಥಾನಕ್ಕೆ ಏರಿರುವುದು ಸಂತೋಷಕರ ಸಂಗತಿ. ಕುಂದರ ಅವರು ಸರಳ ಮತ್ತು ಅಷ್ಟೇ ಕಠೀಣವಾಗಿ ಕಾನೂನು ಪಾಲಿಸುವ ಅವರ ಕಾರ್ಯದಕ್ಷತೆಮೆಚ್ಚುವಂತಹದು ಎಂದು ಬಣ್ಣಿಸಿದರು.

ಹಿರಿಯ ನ್ಯಾಯವಾದಿಗಳಾದ ಆರ್.ಎಸ್. ನಂದಿಅವರುಮಾತನಾಡಿ,ಕಾನೂನುಸೇವಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ವಿಶೇಷವಾಗಿ ಸಂತೋಷ ಕುಂದರ್ ಅವರ ಅವಧಿಯಲ್ಲಿ ಸಾಕಷ್ಟು ಪ್ರಕರಣಗಳು ಇತ್ಯರ್ಥವಾಗಿದ್ದು, ಸಾರ್ವಜನಿಕರು ಕಕ್ಷಿದಾರರು ತಮ್ಮ ಪ್ರಕರಣಗಳನ್ನುರಾಜಿ ಸಂದಾನ ಮೂಕಲ ಇತ್ಯರ್ಥ ಪಡೆಸಿಕೊಂಡು ಉತ್ತಮ ಜೀವನ ಸಾಗಿಸುತ್ತಿರುವುದು ಕುಂದರ್ ಅವರ ಜೀವನಕ್ಕೆ ಉದಾಹರಣೆಯಾಗಿರುತ್ತದೆ.

ನ್ಯಾಯವಾದಿ ಲಾಹೋರಿ,ಬಸವರಾಜ ಮಠ ಹಾಗೂ ಶ್ರೀಮಸೂತಿ ಮಾತನಾಡಿ,ಕುಂದರ್ ಅವರ ಸೇವೆಯನ್ನು ಪ್ರಶಂಸಿದಿರು.

ಕಾನೂನು ಮಹಾವಿದ್ಯಾಯದ ಪ್ರಾಚಾರ್ಯರಾದ ಶ್ರೀಮತ ಸುಮಾ ದೇಸಾಯಿ ಅವರು ಕಾರ್ಯಕ್ರಮ ನಿರೂಪಿಸಿದರು. ಜಿಲ್ಲಾ ವಕೀಲರ ಸಂಘದ ಗೌರವ ಕಾರ್ಯದರ್ಶಿ ಅಶೋಕ ಜೈನಾಪೂರ ವಂದಿಸಿದರು. ಕಾರ್ಯಕ್ರಮದಲ್ಲಿ ಹಿರಿಯ ನ್ಯಾಯವಾದಿಗಳಾದ ಕೆ.ಎಫ್. ಅಂಕಲಗಿ, ರಾಜು ಬಿದರಿ ಮುಂತಾದವರು ಇದ್ದರು.

# ಬಹು ಗ್ರಾಮ ಕುಡಿಯುವ ನೀರು ಸರಬರಾಜು ಕಾಮಗಾರಿಗಳು ಸರಿಯಾಗಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಜಿಪಂ ಸಿಇಓ ರಾಹುಲ್ ಶಿಂಧೆ ಸೂಚನೆ




**ಬೆಳಗಾವಿ :** ಬಹುಗ್ರಾಮ ಕುಡಿಯುವ ನೀರು ಸರಬರಾಜು ಕಾಮಗಾರಿಗಳ ಆರ್ಥಿಕ ಮತ್ತು ಭೌತಿಕವಾಗಿ ಪರಿಶೀಲನೆ ಮಾಡಿ, ಗ್ರಾಮಗಳಲ್ಲಿ ಕುಡಿಯುವ ನೀರಿಗೆ ಯಾವುದೇ ರೀತಿ ತೊಂದ–ರೆಯಾಗದಂತೆ ಕ್ರಮವಹಿಸಬೇಕು ಎಂದು ಅಧಿಕಾರಿಗಳಿಗೆ ಜಿಪಂ ಸಿಇಓ ರಾಹುಲ್ ಶಿಂಧೆ ಸೂಚನೆ ನೀಡಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಗುರುವಾರ (ಮೇ.16) ಬೆಳಗಾವಿ ಹಾಗೂ ಚಿಕ್ಕೋಡಿ ವಿಭಾಗದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕುಡಿಯುವ ನೀರಿನ ಗುಣಮಟ್ಟ ಪರೀ–ಕ್ಷೆ ಮಾಡಬೇಕು. ಎರಡು ವಿಭಾಗಗಳ ಗ್ರಾಮ ಮಟ್ಟದಲ್ಲಿನ ಓವರ್ ಹೆಡ್ ಟ್ಯಾಂಕ್ ಗಳನ್ನು ತಿಂಗಳಿಗೆ ಕನಿಷ್ಠ ಒಂದು ಬಾರಿ ಗ್ರಾಪಂಗಳು ಸ್ವಚ್ಛಗೊಳಿಸಬೇಕು. ಅದರ ಉಸ್ತುವಾರಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ನೋಡಿಕೊಳ್ಳಬೇಕು ಎಂದು ಸೂಚನೆ ನೀಡಿದರು.

ಜಲ ಜೀವನ್ ಮಿಷನ್ (ಜೆಜೆಎಂ) ಕಾಮಗಾರಿಗಳನ್ನು ಕೂಡಲೇ ಮುಕ್ತಾಯಗೊಳಿಸಿ ಪಂಚಾಯತಗಳಿಗೆ ಹಸ್ತಾಂತರ ಮಾಡಿ ಪ್ರತಿಯೊಬ್ಬ ಅಧಿಕಾರಿಗಳು ಖುದ್ದಾಗಿ ಪಂಚಾಯತಿಗಳಿಗೆ ಭೇಟಿ ನೀಡಿ ಕುಡಿಯುವ ನೀರಿನ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಸೂಚನೆ ನೀಡಿದರು. ಇದರ ಮೇಲ್ವಿಚಾರಣೆಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು ಮಾಡಬೇಕೆಂದು ಎಂದು ಜಿಪಂ ಸಿಇಓ ರಾಹುಲ್ ಶಿಂಧೆ ಅವರು ಹೇಳಿದರು.

ಈ ಸಂದರ್ಭದಲ್ಲಿ ಜಿಪಂ ಯೋಜನಾ ನಿರ್ದೇಶಕ ಡಾ: ಎಮ್. ಕೃಷ್ಣರಾಜು, ಆರ್.ಡಿ.ಡಬ್ಲ್ಯೂ.ಎಸ್ ಬೆಳಗಾವಿ ವಿಭಾಗದ ಇಇ ಶಶಿಕಾಂತ ನಾಯಕ ಚಿಕ್ಕೋಡಿ ವಿಭಾಗದ ಇಇ ಪಾಂಡುರಂಗ ರಾವ್, ತಾಲ್ಲೂಕಿನ ಎಇಇ, ಸಮಾಲೋಚಕರು ಹಾಗೂ ಗುತ್ತಿಗೆದಾರರು ಉಪಸ್ಥಿತರಿದ್ದರು.

# ಸಿಇಓ ಅವರಿಂದ ವೈದ್ಯಾಧಿಕಾರಿಗಳೊಂದಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ಪ್ರಗತಿ ಪರಿಶೀಲನಾ ಸಭೆ




**ಕೊಪ್ಪಳ :** ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಂಡೆಯ ಅವರು ಗುರುವಾರದಂದು ಆರೋಗ್ಯಮತ್ತು ಕುಟುಂಬ ಕಲ್ಯಾಣ ಇಲಾಖೆಯ ರಾಷ್ಟ್ರೀಯ ಕಾರ್ಯಕ್ರಮಗಳ ಬಗ್ಗೆ ವೈದ್ಯಾ ಧಿಕಾರಿಗಳೊಂದಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ಪ್ರಗತಿಪರಿಶೀಲನಾಸಭೆನಡೆಸಿದರು. ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳಲ್ಲಿ ಕಡಿಮೆ ಪ್ರಗತಿ ಸಾಧಿಸಿದ ಆರೋಗ್ಯ ಕೇಂದ್ರಗಳಲ್ಲಿ ಕಂಡುಬಂದಂತಹ ನ್ಯೂನ್ಯತೆಗಳನ್ನು ಸರಿಪಡಿಸಿಕೊ ಂಡು ಮುಂದಿನ ದಿನಗಳಲ್ಲಿ ಉತ್ತಮ ಪ್ರಗತಿ ಸಾಧಿಸಲು ಸೂಚಿಸಿದರು. ಸಮುದಾಯ ಆರೋಗ್ಯ ಕೇಂದ್ರಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಉಪಕೇಂದ್ರಗಳ ಕಾಮಗಾರಿಗಳಿಗೆ ಹಾಗೂ ಸಾರ್ವಜನಿಕರ ಆರೋಗ್ಯ ಸೇವೆ ನೀಡಲು ಚಿಕಿತ್ಸಾ ಉಪಕರಣಗಳಿಗೆ ಅನುದಾನ ಅವಶ್ಯಕತೆ ಇದ್ದಲ್ಲಿ, ಜಿ.ಪಂ. ಅನುದಾನವನ್ನು ಸದ್ಬಳಕೆ ಮಾಡಿಕೊಂಡು, ಸಾರ್ವಜನಿಕರಿಗೆ ಉತ್ತಮ ಆರೋಗ್ಯ ಸೇವೆಯನ್ನು ನೀಡುವಂತೆ ಆರೋಗ್ಯ ಸಂಸ್ಥೆಯ ವೈದ್ಯಾಧಿಕಾರಿಗಳಿಗೆ ತಿಳಿಸಿದರು.

ಈ ಸಂದರ್ಭ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಲಿಂಗರಾಜು ಟಿ., ಜಿಲ್ಲಾ ಮಟ್ಟದ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳು, ತಾಲ್ಲೂಕು ಆರೋಗ್ಯಾಧಿಕಾರಿಗಳು ಹಾಗೂ ಜಿಲ್ಲೆಯ ಎಲ್ಲ ಆರೋಗ್ಯ ಸಂಸ್ಥೆಗಳ ವೈದ್ಯಾಧಿಕಾರಿಗಳು ಭಾಗವಹಿಸಿದ್ದರು.

# ಬರ ಪರಿಹಾರ ಹಣ ರೈತರ ಸಾಲಕ್ಕೆ ಕಡಿತಗೊಳಿಸದಂತೆ ಜಿಲ್ಲಾಧಿಕಾರಿ ಸೂಚನೆ

**ವಿಜಯಪುರ :** ಕರ್ನಾಟಕ ಸರ್ಕಾರ ಜಿಲ್ಲೆಯ ರೈತರಿಗೆ ಬರ ಪರಿಹಾರವಾಗಿ 36010.20 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದ್ದು, ಇದು ರೈತರ ಬರ ಪರಿಹಾರಹಣವಾಗಿರುವುದರಿಂದ ಯಾವುದೇ ಕಾರಣಕ್ಕೂ ರೈತರ ಸಾಲಗಳಿಗೆ ಈ ಹಣವನ್ನು ಕಡಿತಗೊಳಿಸಬಾರದು ಎಂದು ಜಿಲ್ಲಾಧಿಕಾರಿ ಟಿ. ಭೂಬಾಲನ್ ಸೂಚಿಸಿದ್ದಾರೆ.


ಈ ಕುರಿತು ಪ್ರಕಟಣೆ ಬಿಡುಗ–’ಡೆ ಮಾಡಿದ ಅವರು, ರಾಜ್ಯ ಸರ್ಕಾರದಿಂದ ನೇರವಾಗಿ ರೈತರ ಖಾತೆಗಳಿಗೆ ಬರ ಪರಿಹಾರದ ಹಣ ಬಿಡುಗಡೆ ಮಾಡಿದೆ.

ಇದನ್ನು ರೈತರ ಸಾಲದ ಖಾತೆಗೆ ಜಮೆ ಮಾಡಿಕೊಳ್ಳಬಾರದು ಎಂದು ಲೀಡ್ ಬ್ಯಾಂಕ್ ವ್ಯವಸ್ಥಾಪಕರು ಹಾಗೂ ವಿಜಯಪುರ ಸಹಕಾರ ಸಂಘಳ ಇಲಾಖೆಯ ಉಪ ನಿಬಂಧಕರಿಗೆ ಸೂಚಿಸಲಾಗಿದೆ.

ಈಗಾಗಲೇ ಮುಂಗಾರು ಆರಂಭವಾಗುತ್ತಿರುವುದರಿಂದ ಬರ ಪರಿಹಾರದ ಹಣ ರೈತರು ಬೀಜ, ರಸಗೊಬ್ಬರ, ಹೊಲದ ಉಳುಮೆ, ಬಿತ್ತನೆಗೆ ಸಿದ್ಧಮಾಡಿಕೊಳ್ಳಲು ಸಹಾಯವಾಗುತ್ತದೆ.

ಹಾಗಾಗಿ ಬ್ಯಾಂಕ್‌ಗಳು ರೈತರಿಗೆ ಸಹಕರಿಸಬೇಕು ಎಂದು ತಿಳಿಸಿದ್ದಾರೆ.

# ಚಾತುರ್ಮಾಸ್ಯ ಶೌತ್ರಯಾಗ ಮನುಕುಲದ ಸುಭಿಕ್ಷೆಗೆ ತೋರಣ



ಬ್ರಹ್ಮನು ಸೃಷ್ಟಿ ಮಾಡುವಾಗ ಮಾನವರ ಕಲ್ಯಾಣಕ್ಕೋಸ್ಕರ ಯಜ್ಞಗಳನ್ನು ಸೃಷ್ಟಿ ಮಾಡಿ ಯಜ್ಞಗಳಿಂದ ನಿಮ್ಮ ಮನೋರಥಗಳನ್ನು ಪೂರೈಸಿಕೊಳ್ಳಿ ಎಂದು ಉಪದೇಶಿಸಿದನು. ಯಜ್ಞದಲ್ಲಿ ಶೌತ್ರ ಹಾಗೂ ಸ್ಮಾರ್ತ ಎಂದು ಎರಡು ಪ್ರಕಾರಗಳಿವೆ. ಶೌತ್ರಯಾಗವು ಕೇವಲ ಅಗ್ನಿಹೋತ್ರಗಳಿಂದಲೇ ಮಾಡಬೇಕಾಗುವುದು. ರಾಜಸೂಯ, ಅಶ್ವಮೇಧ, ಮುಂತಾದ ಮಹಾಯಾಗಗಳನ್ನು ಶ್ರೀರಾಮ ಶ್ರೀ ಕೃಷ್ಣ ಯುಧಿಷ್ಠಿರಾದಿಗಳು ಮಾಡುತ್ತಿದ್ದರೆಂದು ರಾಮಾಯಣ, ಮಹಾಭಾರತಾದಿಗಳಲ್ಲಿ ಉಲ್ಲೇಖವಿದೆ. ಚಂಡಿಯಾಗ, ರುದ್ರಯಾಗ ಮುಂತಾದವುಗಳು ಸ್ಮಾರ್ತ ಯಾಗಗಳಾಗಿದ್ದು ಇವುಗಳನ್ನು ಗ್ರಹಸ್ಥರು ಮಾಡಬಹುದಾಗಿದೆ.

ಈ ಸ್ಮಾರ್ತಯಾಗಗಳಿಗೆ ಶೌತ್ರಯಾಗವೇ ಮೂಲವಾಗಿದ್ದು ಸ್ಮಾರ್ತಯಾಗದ 100 ಪಟ್ಟು ಫಲ ಕೊಡುವುದಾಗಿದೆ. ಈಗಿನ ಕಾಲದಲ್ಲಿ ಮೇಲಿಂದ ಮೇಲೆ ನಾವು ಅತಿವೃಷ್ಟಿ ಅನಾವೃಷ್ಟಿ ಸುನಾಮಿ ಭೂಕಂಪ ಸಾಂಕ್ರಾಮಿಕ ರೋಗ ಮುಂತಾದ ಉತ್ಪಾತಗಳನ್ನು ನೋಡುತ್ತಿದ್ದೇವೆ. ಇವುಗಳನ್ನು ತಡೆದು ಸಕಾಲವೃಷ್ಟಿ ಶಾಂತೆ ಸುಬಿಕ್ಷ ಆಗಲೆಂದು ಎಲ್ಲರಿಗೂ ಕಲ್ಯಾಣವಾಗಲೆಂದು ಧಾರವಾಡದಲ್ಲಿರುವ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಸಂಸ್ಕೃತ ಪಾಠ ಶಾಲೆ ವತಿಯಿಂದ ಚಾತುರ್ಮಾಸ್ಯ ಶೌತ್ರಯಾಗವನ್ನು ಹಮ್ಮಿಕೊಳ್ಳಲಾಗಿದೆ.

ಈ ಚಾತುರ್ಮಾಸ್ಯಯಾಗವು ರಾಜ ಸೂರ್ಯ ಯಾಗದಲ್ಲಿ ಉಲ್ಲೇಖವಾಗಿದ್ದು ಇದರಲ್ಲಿ ಯಾವುದೇ ಪಶುಸಂಬಂಧವಿರದೇ ತುಪ್ಪ, ಅಕ್ಕಿಹಿಟ್ಟು, ಚರು, ಆಮಿಕ್ಷಾ, ಉರಿದ ಗೋಧಿ, ದಧಿಸಕ್ತು ಮುಂತಾದ ಹವಿಸ್ಸುಗಳಿಂದ

**ಧಾರವಾಡದ ದತ್ತ ಮಂದಿರದಲ್ಲಿ ಪ್ರಾರಂಭಗೊಂಡಿರುವ ಶೌತ್ರಯಾಗದ ನಿಮಿತ್ತ ಈ ಲೇಖನ**

ಈ ಯಜ್ಞವನ್ನು ಮಾಡಲಾಗುವುದು ಅಕ್ಷಯವಾದ ಪುಣ್ಯ ಲೋಕ ಕಲ್ಯಾಣ ವಾಗುವುದೆಂದು ಫಲಶ್ರುತಿ ಇರುವುದು.

ಈ ಯಾಗದಲ್ಲಿ ವೈಶ್ವಾನರ, ವರುಣಪ್ರಘಾಸ, ಸಾಕಮೇಧ, ಶುನಾಸೀರ, ಎಂದು ನಾಲ್ಕು ವರ್ಷ ಪರ್ವಗಳ ವಿಭಾಗವಿದ್ದು, ಇವುಗಳನ್ನು ಮೂರು ತಿಂಗಳಿಗೊಂದರಂತೆ ಒಂದು ವರ್ಷದವರೆಗೆ ಅಥವಾ ಒಂದು ಐದು ಏಳು 12 ದಿವಸಗಳಲ್ಲಿ ಮಾಡಬಹುದಾಗಿದೆ. ಇಲ್ಲಿ ಐದು ದಿವಸಗಳ ಕ್ರಮವನ್ನು ಹಿಡಿದಿದ್ದು ಈ ಯಾಗಕ್ಕೆ ಯಜಮಾನರು ಹಾಗೂ ಅವರ ಪತ್ನಿ ಬ್ರಹ್ಮಾ, ಹೋತಾ, ಅದ್ವರ್ಯರು, ಪ್ರತಿಪ್ರಸ್ಥಾತಾ ಅಗ್ನಿದ್ರ ಸದಸ್ಯ, ಮಹಾಸದಸ್ಯ ಹೀಗೆ 10.15 ಋತ್ವಿಜರ ಬೇಕಾಗಿದ್ದು ಮಹಾರಾಷ್ಟ್ರ, ಆಂಧ್ರಪ್ರದೇಶ, ಕರ್ನಾಟಕಾದಿಗಳಿಂದ ದೊಡ್ಡ–ದೊಡ್ಡ ಘನಪಾಠಿಗಳು ಹಾಗೂ ಶಾಸ್ತ್ರಜ್ಞರು, ಜಗದ್ಗುರುಗಳು ಬಂದಿದ್ದು.

ಈ ಕಾರ್ಯಕ್ರಮದಲ್ಲಿ ವಿಶೇಷವಾಗಿ ಉಪಸ್ಥಿತರಿರುವ ಸಂಕೇಶ್ವರದ ಪಿಠಾಧಿಪತಿಗಳಾದಂತಹ ಶ್ರೀ ಜಗದ್ಗುರು ಸಚ್ಚಿದಾನಂದ ಶಿವಾಭಿನವ–ವಿದ್ಯಾನೃಸಿಂಹ ಭಾರತಿ ಸ್ವಾಮಿಗಳು ಉಪಸ್ಥಿತರಾಗಿ ಆಶೀರ್ವದಿಸಲಿದ್ದಾರೆ. ಈ ಕಾರ್ಯಕ್ರಮವು ಕ್ರೋಧಿನಾಮ ಸಂವತ್ಸರ ವೈಶಾಖ ಶುಕ್ಲ ದಶಮಿ ಸಾಯಂಕಾಲದಿಂದ ದಿನಾಂಕ: 18.05.2024 ರಿಂದ ವೈಶಾಖ ಶುಕ್ಲ ಪೂರ್ಣಿಮಾ ಅಂದರೆ ದಿನಾಂಕ: 23.05.2024ರ ವರೆಗೆ ಶ್ರೀಮದ್ ಜಗದ್ಗುರು ಶಂಕರಾಚಾರ್ಯ ಸಂಸ್ಕೃತ ಪಾಠಶಾಲಾ ಧಾರವಾಡದಲ್ಲಿ ನಡೆಯುತ್ತಿರುವುದು ಕಾರಣ ಈ ಕಾರ್ಯಕ್ರಮಕ್ಕೆ ಸಕಲಸದಭಕ್ತರು ಆಗಮಿಸುವುದರ ಮೂಲಕ ತಮ್ಮ ಶ್ರೇಯೋಭಾಗಿಗಳಾಗಬೇಕೆಂದು ಈ ಸಂದರ್ಭದಲ್ಲಿ ವಿನಂತಿಸಿಕೊಳ್ಳಲಾಗಿದೆ.

ಇನ್ನು ಈ ಸಂದರ್ಭದಲ್ಲಿ ನಡೆಯುವ ಕಾರ್ಯಕ್ರಮಗಳು ದಿನಾಂಕ: 18.05.2024ರಂದು ವೈಶಾಖ ಶುಕ್ಲ ದಶಮಿ ಶನಿವಾರ ಮಧ್ಯಾನ ಶ್ರೀ ಶಂಕರ ಜಯಂತಿ ನಂತರ ಪುಣ್ಯಾಹ, ನಾಂದೀಶ್ರಾಧ, ಸಾಯಂಕಾಲ ಅಗ್ನಿಹೋತ್ರ ಆರಂಭ ಉದಕ ಶಾಂತಿ ಪ್ರತಿಸರ ಬಂದ. ದಿನಾಂಕ: 19.05.2024ರಂದು ವೈಶಾಖ ಶುಕ್ಲ ಏಕಾದಶಿ ರವಿವಾರ ದಿನ ಚಾತುರ್ಮಾಸ್ಯ ಪ್ರಧಾನ ಸಂಕಲ್ಪ ಋತ್ವಿಗ್‌ವರ್ಣ, ಮಧುಪರ್ಕ, ವೈಶ್ವಾನರ, ಪರ್ಜನ್ಯೇಷ್ಟಿ, ವೈಶ್ವದೇವಪರ್ವ ಸಂಕಲ್ಪ, ಅನ್ನದಾನ, ಪರ್ವಾನುಷ್ಠಾನ, ವರುಣ ಪ್ರಘ್ರಾಸ ಪರ್ವದ ಅನ್ವಾದಾನ. ದಿನಾಂಕ: 20.05.2024ರಂದು ವೈಶಾಖ ಶುಕ್ರ ದ್ವಾದಶಿ ಸೋಮವಾರ ವರುಣ ಪ್ರಘ್ರಾಸ ಪರ್ವಯಾಗ, ಅವಭಥೇಷ್ಟಿ. ದಿನಾಂಕ: 21.05.2024ರಂದು ವೈಶಾಕ ಶುಕ್ರ ತ್ರಯೋದಶಿ ಮಂಗಳವಾರ ಸಾಕಮೇಧ ಪರ್ವಾರಂಭ ಬೆಳಿಗ್ಗೆ ಐದಕ್ಕೆ ಮಧ್ಯಾಹ್ನ ಸಾಂತಪನೇಷ್ಟೀ, ಸಾಯಂಕಾಲ ಗ್ರಹ ಮೇಧಿಯೇಷ್ಟಿ. ದಿನಾಂಕ: 22.05.2024ರಂದು ವೈಶಾಖ ಶುಕ್ರ ಚತುರ್ದಶಿ ಬುಧವಾರ ಬೆಳಗ್ಗೆ 5:00 ಪೂರ್ಣಾದರ್ವಿ ಹೋಮ, ಕ್ರೀಡೇನೇಷ್ಟಿ, ಮಹಾಹವಿ ತ್ರ್ಯಂಬಕೇಷ್ಟಿ, ಆದಿತ್ಯೇಷ್ಟಿ. ದಿನಾಂಕ: 23.05.2024 ರಂದು ವೈಶಾಖ ಶುಕ್ರ ಪೂರ್ಣಿಮಾ ಗುರುವಾರದಂದು ಶುನಾಸೀರ ಪರ್ವದ ಅನುಷ್ಠಾನ. ದಿನಾಂಕ: 24.05.2024ರಂದು ವೈಶಾಖ ಶುಕ್ಲ ಪ್ರತಿಪದ ಶುಕ್ರವಾರದಂದು ಪೂರ್ಣಿಮಾ ಸೀಷ್ಟಿ ಸಮಾರೋಪ ಹಾಗೂ ಮಹಾಪ್ರಸಾದ ನ್ಯಾಯಚೂಡಾಮಣಿ ವಿದ್ವಾನ್ ರಾಜೇಶ್ವರ ಶಾಸ್ತ್ರಿಗಳಿಂದ ಜರುಗಲಿದ್ದು.

ಹಾಗೂ ಈ ಕಾರ್ಯಕ್ರಮದಲ್ಲಿ ಬ್ರಹ್ಮ ವೇದಮೂರ್ತಿ ಶ್ರೀ ಚಂದ್ರಶೇಖರ ಶಾಸ್ತ್ರಿ ಕಾರ್ಲೇಕರ್ ಪುಣೆ, ಹೋತಾ ಋಗ್ವೇದ, ಘನಪಾಠಿ, ದಶಗ್ರಂಥೀ, ಗೋಪಾಲ ಜೋಶಿ ಸಾತಾರಾ, ಅದ್ವರ್ಯು ವೇದಮೂರ್ತಿ ಶ್ರೀ ಬಾಲಚಂದ್ರ ಜೋಶಿ ಪುಣೆ, ಅಗ್ನೀದ್ರ ವೇದಮೂರ್ತಿ ಶ್ರೀಯುತ ವಿನಾಯಕ ಶಾಸ್ತ್ರಿ, ಪಾರ್ಕಿ ಪುಣೆ, ಪ್ರತಿಪ್ರಸ್ಥಾತಾ ಋಗ್ವೇಧಘನಪಾಠೀ ದಶಗ್ರಂಥೀ ವೇದಮೂರ್ತಿ ಭಾನುದಾಸ ಜೋಶಿ ಪುಣೆ, ಸದಸ್ಯ ವೇದಮೂರ್ತಿ ಶ್ರೀ ಗಜಾನನ ಜೋಶಿ ವಾಠಾರಕರ ಪುಣೆ, ಮಹಾಸದಸ್ಯ ವೇದಮೂರ್ತಿ ಕೃಷ್ಣ ಗೋ.ಆರ್ವೀಕರ್ ನಾಗಪುರ ಇವರುಗಳು ಭಾಗವಹಿಸಿದ್ದು ಈ ರೀತಿ ಬಹಳ ವರ್ಷಗಳ ನಂತರ ಧಾರವಾಡದ ದತ್ತ ಮಂದಿರದಲ್ಲಿ ನಡೆಯುತ್ತಿರುವ ಚಾತುರ್ಮಾಸ್ಯ ಶೌತ್ರಯಾಗವು ಹೊಸ ಮನ್ವಂತರಕ್ಕೆ ಕಾರಣೀಭೂತವಾಗಿದೆ.

ಇಡೀ ಮನುಕುಲ ಸುಭಿಕ್ಷಯಿಂದ ಇರಲು ಚಾತುರ್ಮಾಸ್ಯ ಶೌತ್ರಯಾಗವು ಸಮಸ್ಥ ಭೂ–ಮಂಡಲದ ಸಕಲ ಜೀವರಾಶಿಗಳಿಗೆ ಸುಭಿಕ್ಷಯನ್ನು ಕರುಣಿಸಲೆಂದು ಧಾರವಾಡದ ಗಾಂಧಿ ಚೌಕದಲ್ಲಿನ ಬಹು ಪುರಾತನ ಕಾಲದ ದತ್ತ ಮಂದಿರದಲ್ಲಿನ ಶ್ರೀಮದ್ ಜಗದ್ಗುರು ಶಂಕರಾಚಾರ್ಯರ ಸಂಸ್ಕೃತ ಪಾಠಶಾಲೆಯಲ್ಲಿ ಈ ಯಾಗವೂ ಜರುಗುತ್ತಿರುವುದು ವಿಶೇಷವಾಗಿದೆ.

**– ಚಿತ್ರಬರಹ**
**ಚಿದಂಬರ್. ಪಿ. ನಿಂಬರಗಿ**
**ರಾಜ್ಯ ಶಿಕ್ಷಣ ಸಿರಿ ಪ್ರಶಸ್ತಿ ಪುರಸ್ಕೃತರು,**
**ಶಿರೋಳ, ಧಾರವಾಡ**
**ಮೊ : 9845026733**

# ಹುಬ್ಬಳ್ಳಿಯ ಬಾಲಗಾಯಕಿ ವಿಜಯಲಕ್ಷ್ಮೀ ನಿಂಬರಗಿಗೆ ಬೇಕಿದೆ–ಅವಕಾಶಗಳ ಬಾಗಿಲು



ನಮ್ಮ ಹಳ್ಳಿಯ ಅದೆಷ್ಟೋ ಪ್ರತಿಭೆಗಳು ಹಲವಾರು ರಂಗಗಳಲ್ಲಿ ಬಹಳಷ್ಟು ಕಷ್ಟಪಟ್ಟು ಅವಕಾಶಗಳು ಸಿಗಲಾರದೆ ಎಲೆ ಮರೆಯ ಕಾಯಿಗಳಾಗಿ ಉಳಿಯುತ್ತವೆ. ನಮ್ಮ ಸರಕಾರದ ಅನೇಕ ಗ್ರಾಮ ತಾಲೂಕ ಹೀಗೆ ರಾಜ್ಯ–ರಾಷ್ಟ್ರಮಟ್ಟದ ಕಾರ್ಯಕ್ರಮಗಳಲ್ಲಿ ನಮ್ಮ ರಾಜ್ಯ ರಾಷ್ಟ್ರದ ಪ್ರತಿಭೆಗಳನ್ನು ಗುರುತಿಸದೆ. ಬೇರೆ ರಾಜ್ಯ–ರಾಷ್ಟ್ರದತ್ತ ಮುಖಮಾಡುವುದು ವಿಪರ್ಯಾಸವೇ ಸರಿ.

ಈವ್ಯವಸ್ಥೆಯುನಿಲ್ಲಬೇಕಿದೆಈಬಗ್ಗೆರಾಜ್ಯಕನ್ನಡಮತ್ತು ಸಂಸ್ಕೃತಿ ಇಲಾಖೆ ಗಮನಹರಿಸಬೇಕಿದೆ. ಇತ್ತೀಚಿಗೆ ನನ್ನ ಸ್ನೇಹಿತರಿಂದ ಸಂಪರ್ಕಕ್ಕೆ ಬಂದ ಬಾಲಗಾಯಕಿ ವಿಜಯಲಕ್ಷ್ಮೀ ನಿಂಭರಗಿಯು ಮೂಲತಃ ಉತ್ತರ ಕರ್ನಾಟಕ ಭಾಗದ ಹುಬ್ಬಳ್ಳಿಯ ಬಾಲಪ್ರತಿಭೆಗೆ ಕೂಡಾ ಅವಕಾಶಗಳು ಬೇಕಾಗಿವೆ. ತಂದೆ ಆನಂದ, ತಾಯಿ ದೀಪಾ ಇವರ ಮಗಳಾದ ವಿಜಯಲಕ್ಷ್ಮೀ ಬಾಲ್ಯದಿಂದ ಹಾಡುವುದನ್ನು ಹವ್ಯಾಸ ಮಾಡಿಕೊಂಡು ಒಂದನೇ ತರಗತಿಯಿಂದಲೇ ದೇವರನಾಮ, ಭಾವಗೀತೆ, ಜನಪದಗೀತೆ, ಚಿತ್ರಗೀತೆಯನ್ನು ಹಾಡುವ ಮೂಲಕ ಜನರ ಗಮನ ಸೆಳೆದಿದ್ದು, ಹೆಗ್ಗಳಿಕೆಯೇ ಸರಿ.

ಹುಬ್ಬಳ್ಳಿಯ ರಚನಾ ನಾಡಿಗೇರರವರ ಲಲತ ಸಂಗೀತ ಪಾಠಶಾಲೆಯಲ್ಲಿ ಸಂಗೀತಾಭ್ಯಾಸವನ್ನು ಪೂರೈಸುತ್ತಿರುವ ಕುಮಾರಿ. ವಿಜಯಲಕ್ಷ್ಮೀ ನಿಂಬರಗಿ–ಸಂಗೀತ ಹಾಗೂ ಶಾಲಾ ಅಭ್ಯಾಸದಲ್ಲಿ ಸದಾ ಮುಂದೆ ಇದ್ದು ಈಗಾಗಲೇ ತಾಲೂಕ, ಜಿಲ್ಲಾ ಮಟ್ಟದ ಶಾಲಾ ಸಂಗೀತ ಕಾರ್ಯಕ್ರಮಗಳಲ್ಲಿ ಪ್ರಥಮ, ದ್ವಿತೀಯ ಸ್ಥಾನಗಳನ್ನು ನಿರಂತರವಾಗಿ ಪಡೆಯುವ ಮೂಲಕ ಶಾಲೆಗೂ ಕೀರ್ತಿ ತಂದಿರುವುದು.

ಪ್ರಸ್ತುತ ಹುಬ್ಬಳ್ಳಿಯ ಮಹಿಳಾ ವಿದ್ಯಾಪೀಠದ ಬಾಲಕಿಯರ ಪ್ರೌಢಶಾಲೆಯಲ್ಲಿ ಹತ್ತನೇಯ ತರಗತಿಯಲ್ಲಿ ಓದುತ್ತಿರುವ ಕುಮಾರಿ ವಿಜಯಲಕ್ಷ್ಮೀ ನಿಂಬರಗಿ ಸರಕಾರ ಸಂಘ ಸಂಸ್ಥೆಗಳು ಅವಕಾಶವನ್ನು ನೀಡಿ ಪ್ರೋತ್ಸಾಹಿಸಬೇಕಾಗಿದೆ.

ಸಂಪರ್ಕಕ್ಕಾಗಿದೂ–8792536452,9148766390 ಇಲ್ಲಿಗೆ ಸಂಪರ್ಕಿಸುವ ಮೂಲಕ ಬಾಲ ಪ್ರತಿಭೆಗೆ ಪ್ರೋತ್ಸಾಹ ನೀಡಬೇಕಿದೆ. ಶ್ರೀಮತಿ ವನಿತಾ



ಕುಲಕರ್ಣಿ ಹಾಗೂ ಸಂಗೀತ ಪಾಠಶಾಲೆಯ ರಚನಾ ನಾಡಿಗೇರರವರ ಮಾರ್ಗದರ್ಶನ ಪ್ರೋತ್ಸಾಹವೇ ನನ್ನ ಎಲ್ಲ ಸಂಗೀತ ಅಭ್ಯಾಸಕ್ಕೆ ಸಹಕಾರಿಯಾಗಿದೆ ಎಂದು ಕುಮಾರಿ. ವಿಜಯಲಕ್ಷ್ಮೀ ನಿಂಬರಗಿ ತನ್ನ ಮನದಾಳದ ಅಭಿಪ್ರಾಯವನ್ನು ಹಂಚಿಕೊಂಡಳು.

ಈಗಾಗಲೇ ಮಿರಜದ ಅಖಿಲ ಭಾರತೀಯ ಗಂಧರ್ವ ಮಹಾವಿದ್ಯಾಲಯದ ಪ್ರಾರಂಬಿಕ ಗಾಯನ ಪರೀಕ್ಷೆಯಲ್ಲಿ ಡಿಸ್ಟಿಂಷನ್ ಪಡೆದಿರುವುದು ಅಭಿನಂದನಾರ್ಹವಾಗಿದೆ. ಈ ಕಾರ್ಯಕ್ಕೆ ಈಗಾಗಲೇ ನಮ್ಮ ಶ್ರೀ ಶಿವ ಚಿದಂಬರ ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ (ರಿ) ಗದಗ ನಿರಂತರವಾಗಿ ಕಲೆ, ಸಾಹಿತ್ಯ, ಸಂಸ್ಕೃತಿ ಬೆಳೆಸುವ ಸಲುವಾಗಿ ರಚಿಸು ಸಂಸ್ಕೃತಿ ಸೌರಭ 2024 ರಡಿಯಲ್ಲಿ ಬಾಲ ಪ್ರತಿಭೆಗಳಿಗೆ ಅವಕಾಶವನ್ನು ನಿಡುತ್ತ ಬಂದಿದ್ದು ಕುಮಾರಿ ವಿಜಯಲಕ್ಷ್ಮೀ ನಿಂಬರಗಿಯನ್ನು ಈ ವೇದಿಕೆಯ ಮೂಲಕ ಪರಿಚಯಿಸುವ ಕಾರ್ಯವನ್ನು ಮುಂದಿನ ದಿನಗಳಲ್ಲಿ ಮಾಡಲಾಗುವುದು ಎಂಬುದು ಸಂಸ್ಥೆಯ ಸದಾಶಯವಾಗಿದ್ದು ಕುಮಾರಿ ವಿಜಯಲಕ್ಷ್ಮೀ ನಿಂಬರಗಿ ಗಾಯನ ಲೋಕದಲ್ಲಿ ಹೆಮ್ಮರವಾಗಿ ಬೆಳೆಯಲಿ ಎಂಬುದು ಆಶಯ.

**– ಚಿತ್ರಬರಹ**
**ಚಿದಂಬರ್. ಪಿ. ನಿಂಬರಗಿ**
**ರಾಜ್ಯ ಶಿಕ್ಷಣ ಸಿರಿ ಪ್ರಶಸ್ತಿ ಪುರಸ್ಕೃತರು,**
**ಶಿರೋಳ, ಧಾರವಾಡ**
**ಮೊ : 9845026733**

# ಜಿಲ್ಲಾಧಿಕಾರಿಗಳ ನಿರ್ದೇಶನದ ಮೇರೆಗೆ ಹೆಬ್ಬಳ್ಳಿ ಗ್ರಾಮಕ್ಕೆ ತಹಶೀಲ್ದಾರ ನೇತೃತ್ವದ ಅಧಿಕಾರಿಗಳ ತಂಡ ಭೇಟಿ: ಕುಡಿಯುವ ನೀರು ಸರಬರಾಜು ವ್ಯವಸ್ಥೆ ಪರಿಶೀಲಿಸಿ, ವರದಿ ಸಲ್ಲಿಕೆ: ಅಗತ್ಯಕ್ರಮಕ್ಕೆ ಜಿಲ್ಲಾಧಿಕಾರಿ ಸೂಚನೆ





**ಧಾರವಾಡ :** ಧಾರವಾಡ ಜಿಲ್ಲೆಯಲ್ಲಿ ಜನ,ಜಾನುವಾರುಗಳಿಗೆ ಕುಡಿಯುವ ನೀರು, ಮೇವು ಕೊರತೆ ಆಗದಂತೆ ಮುನ್ನೆಚ್ಚರಿಕೆ ವಹಿಸಿ, ಕ್ರಮವಹಿಸಲು ಸೂಚಿಸಲಾಗಿದ್ದರೂ ತಾಂತ್ರಿಕ ಸಮಸ್ಯೆ, ಗ್ರಾಮಸ್ಥರೊಂದಿಗಿನ ಸಂವಹನದ ಕೊರತೆಯಿಂದಾಗಿ ಹೆಬ್ಬಳ್ಳಿ ಗ್ರಾಮದಲ್ಲಿ ಕುಡಿಯುವ ನೀರಿನ ಸರಬರಾಜುದಲ್ಲಿ ವ್ಯತ್ಯಾಸವಾಗಿ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವ ಕುರಿತು ಗಮನಕ್ಕೆ ಬಂದ ತಕ್ಷಣ, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಇಂದು ಬೆಳಿಗ್ಗೆ ಧಾರವಾಡ ತಹಶೀಲ್ದಾರ ಡಾ.ಡಿ.ಎಚ್.ಹೂಗಾರ ನೇತೃತ್ವದಲ್ಲಿ ಇಓ ಸುಭಾಸ ಸಂಪಗಾಂವಿ, ಗ್ರಾಮೀಣ ಕುಡಿಯುವ ನೀರು ಇಲಾಖೆ, ನರೇಗಾ ಎಡಿ ಮತ್ತು ಸಂಬಂಧಿಸಿದ ಇತರ ಅಧಿಕಾರಿಗಳ ನೇತೃತ್ವದಲ್ಲಿ ಅಧಿಕಾರಿಗಳ ತಂಡವನ್ನು ಪರಿಶೀಲಿಸಿ ವರದಿ ನೀಡಲು ಮತ್ತು ಕೈಗೊಳ್ಳಬೇಕಾದ ತುರ್ತು ಕ್ರಮಗಳನ್ನು ಶಿಫಾರಸ್ಸು ಮಾಡಲು ಸೂಚಿಸಿ, ಕಳುಹಿಸಿದ್ದರು.

ತಹಶೀಲ್ದಾರ ಡಾ.ಡಿ.ಎಚ್.ಹೂಗಾರ ನೇತೃತ್ವದ ತಂಡವು ಹೆಬ್ಬಳ್ಳಿ ಗ್ರಾಮದಲ್ಲಿರುವ ಮೇಲ್ಮಟ್ಟದ ಜಲ ಸಂಗ್ರಹಗಾರ(ಓಎಚ್‌ಟಿ), ನೆಲಮಟ್ಟದ ಜಲ ಸಂಗ್ರಹಗಾರ ಹಾಗೂ ಅಮ್ಮಿನಭಾವಿಯಿಂದ ಕುಡಿಯುವ ನೀರು ಸರಬರಾಜು ಆಗುವ ಪೈಪ್‌ಲೈನ್ ವ್ಯವಸ್ಥೆ ಪರಿಶೀಲಿಸಿತು. ಗ್ರಾಮಸ್ಥರು ಪ್ರತಿನಿತ್ಯ ಕುಡಿಯುವ ನೀರಿನ ಸರಬರಾಜುದಲ್ಲಿ ವಿಳಂಬ, ವ್ಯತ್ಯಯವಾಗುತ್ತಿರುವುದನ್ನು ವಿವರಿಸಿದರು.

ಪ್ರಮುಖವಾಗಿ ಅಮ್ಮಿನಭಾವಿಯಿಂದ ಹೆಬ್ಬಳ್ಳಿಗೆ ನೀರು ಸರಬರಾಜು ಮಾಡುವ ಪೈಪ್‌ಗಳನ್ನು ಪರಿಶೀಲಿಸಬೇಕು. ಓಎಚ್‌ಟಿ ಬದಲಾಯಿಸಬೇಕು ಮತ್ತು ಗ್ರಾಮದ ಜನಸಂಖ್ಯೆ ಹೆಚ್ಚು ಇರುವದರಿಂದ ಇನ್ನೊಂದು ದೊಡ್ಡ ಜಲಸಂಗ್ರಗಾರ ಕಟ್ಟಿಸಬೇಕೆಂದು ಗ್ರಾಮಸ್ಥರು ತಿಳಿಸಿದರು.

ಈ ಎಲ್ಲ ವಿಚಾರಗಳನ್ನು ತಹಶೀಲ್ದಾರ ಅವರು ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರ ಗಮನಕ್ಕೆ ದೂರವಾಣಿ ಮೂಲಕ ತಿಳಿಸಿದಾಗ, ಕುಡಿಯುವ ನೀರಿಗೆ ಸಂಬಂಧಿಸಿದ ಪ್ರಸ್ತಾವನೆಯನ್ನು ತಕ್ಷಣ ತಾಲೂಕು ಟಾಸ್ಕ್ ಫೋರ್ಸ್ ಸಮಿತಿಗೆ ಸಲ್ಲಿಸಿ, ಅನುಷ್ಠಾನಕ್ಕೆ ಅನುಮೋದನೆ ಪಡೆಯಬೇಕು. ಹೆಬ್ಬಳ್ಳಿ ದೊಡ್ಡ ಗ್ರಾಮ, ಅಂದಾಜು 20 ಸಾವಿರದಷ್ಟು ಜನಸಂಖ್ಯೆ ಹೊಂದಿರುವ ಗ್ರಾಮವಾಗಿರುವದರಿಂದ ಸುಮಾರು ಎರಡು ಲಕ್ಷ. ಲೀಟರ್ ನೀರು ಸಂಗ್ರಹಣಾ ಸಾಮರ್ಥ್ಯದ ನೆಲಮಟ್ಟದ ಜಲಸಂಗ್ರಹಗಾರ ನಿರ್ಮಿಸಲು ಜಲ್ ಜೀವನ್ ಮಿಷನ್ ಯೋಜನೆಯಡಿ, ಈಗಾಗಲೇ ಕಾಮಗಾರಿ ಪ್ರಾರಂಭಿಸಲಾಗಿದೆ ಎಂದು ಜಿಲ್ಲಾ ಪಂಚಾಯತ ಉಪ ಕಾರ್ಯದರ್ಶಿಗಳು ತಿಳಿಸಿಸಿದ್ದು, ಸದರಿ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಸಂಬಂಧಿಸಿದ ಗ್ರಾಮ ಪಂಚಾಯತ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದೇನೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಹೆಬ್ಬಳ್ಳಿ ಗ್ರಾಮದಲ್ಲಿರುವ ಮೇಲ್ಮಟ್ಟದ ಜಲಸಂಗ್ರಹಗಾರ ಕೇವಲ 14 ವರ್ಷ ಹಳೆಯದಾಗಿದ್ದು, ಸುಸ್ಥಿಯಲ್ಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಆದಾಗ್ಯೂ ಹಿರಿಯ ಇಂಜನಿಯರಗಳಿಂದ ಅದರ ಸಾಮರ್ಥ್ಯ ಮತ್ತು ಗುಣಮಟ್ಟವನ್ನು ಮರು ಪರಿಶೀಲನೆ ಮಾಡಿಸುತ್ತೇನೆ. ಹೆಬ್ಬಳ್ಳಿ ಗ್ರಾಮಕ್ಕೆ ಅಂತರ ನಿಲುಗಡೆ ಇಲ್ಲದೆ ಕುಡಿಯುವ ನೀರು ನಿರಂತರವಾಗಿ ಸರಬರಾಜು ಆಗುತ್ತಿದೆ. ಮುಂಗಾರು ಪೂರ್ವದ ಮಳೆ,ಗಾಳಿ ಇತರ ಕಾರಣಗಳಿಂದ ಆಗು ಹಠಾತ್ ವಿದ್ಯುತ್ತ ನಿಲುಗಡೆ, ಆಕಸ್ಮಿಕವಾಗಿ ಉಂಟಾಗುವ ಪೈಪ್ ಸೋರಿಕೆಗಳಿಂದ ಸ್ವಲ್ಪ ಮಟ್ಟಿಗೆ ಯೊಂದರೆ ಆಗಿರಬಹುದು. ಎಲ್ಲವನ್ನು ಸರಿಪಡಿಸಿ ಕ್ರಮವಹಿಸಲು, ಗ್ರಾಮ ಪಂಚಾಯತ ಅಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ಜಿಲ್ಲಾಧಿಕಾರಿಗಳು ತಿಳಿಸಿದರು.

ಇಂತಹ ಬರ ಪರಿಸ್ಥಿಯಲ್ಲಿಯೂ ತೊಂದ–ರೆ ಆಗದಂತೆ ಕುಡಿಯುವ ನೀರು ಪೂ–ರೈಕೆ ಮಾಡಲು ಗ್ರಾಮಸ್ಥರ, ಸಾರ್ವಜನಿಕರ ಸಹಕಾರವು ಬೇಕು. ಈ ಕುರಿತು ಗ್ರಾಮಸ್ಥರಿಗೆ ಇನ್ನಷ್ಟು ಮನವರಿಕೆ ಮಾಡಲು ಮತ್ತು ಸದಾಕಾಲ ಜಿಲ್ಲಾಡಳಿತ, ತಾಲೂಕು ಆಡಳಿತ ನಿಮ್ಮೊಂದಿಗೆ ಎಂದು ತಿಳಿಸಲು ತಹಶೀಲ್ದಾರ ಅವರಿಗೆ ತಿಳಿಸಿದರು.

ಅದರಂತೆ ತಹಶೀಲ್ದಾರ ಡಾ.ಡಿ.ಎಚ್. ಹೂಗಾರ ಅವರು ಸಭೆಗೆ ಜಿಲ್ಲಾಧಿಕಾರಿಗಳ ಸಂದೇಶದ ಮಾಹಿತಿ ನೀಡಿ, ಕುಡಿಯುವ ನೀರಿನ ಸಮಸ್ಯೆ ಆಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ತಾಂತ್ರಿಕ ಕಾರಣದಿಂದ ಕೆಟ್ಟಿದ್ದ ಬೋರವೇಲ್ ದುರಸ್ತಿ ಮಾಡಿಸಿ, ಗ್ರಾಮಸ್ಥರ ಸಮ್ಮುಖದಲ್ಲಿ ಮರುಚಾಲನೆಗೊಳಿಸಿದರು.

ಈ ಸಂದರ್ಭದಲ್ಲಿ ತಾಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಸುಭಾಸ ಸಂಗಾಂವಿ, ಸಹಾಯಕ ನಿರ್ದೇಶಕ ನಿರ್ದೇಶಕರು(ಗ್ರಾಉ) ಚಂದ್ರು ಪೂಜಾರ, ಗ್ರಾಮೀಣ ಕುಡಿಯುವ ನೀರು ನೈರ್ಮಲ್ಯ ಇಲಾಖೆಯ ಸಹಾಯಕ ಇಂಜನೀಯರ ಚಂದ್ರಶೇಖರ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಬಸವರಾಜ ಮಾದನಬಾವಿ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

## ಹುಬ್ಬಳ್ಳಿಯ ರಿಲಾಯನ್ಸ್ ಜನರಲ್ ಇನ್ಸುರೆನ್ಸ್ ಕಂಪನಿಗೆ ರೂ.2 ಲಕ್ಷ 60 ಸಾವಿರಗಳ ದಂಡ ಮತ್ತು ಪರಿಹಾರ

**ಧಾರವಾಡ:**ಹುಬ್ಬಳ್ಳಿಯಉಣಕಲ್‌ನಿವಾಸಿಶ್ರೀ ರಾಜೀವಮರಡೂರಎಂಬುವವರುಭಾರತದ ರೋಗ ನಿರೋಧಕ ಲಿಮಿಟೆಡ್ ಕಂಪನಿಯಲ್ಲಿ ಹಿರಿಯ ಅಧಿಕಾರಿಯಾಗಿದ್ದು ತಮ್ಮ ಸ್ವಂತ ಉಪಯೋಗಕ್ಕಾಗಿ ಮಾರುತಿ ಸುಜುಕಿ ಸಿಫ್ಟ್ ಕಾರನ್ನು 2011 ರಲ್ಲಿ ಖರೀದಿಸಿದ್ದರು. ಆ ಕಾರಿಗೆ ಎದುರುದಾರರಲ್ಲಿ ರೂ.6,168/– ಪಾವತಿಸಿ ಒಂದುವರ್ಷದವಿಮೆಯನ್ನುಮಾಡಿಸಿದ್ದರು. ಆಕಾರಿಗೆಖಆಗಿರೂ.2,09,400/–ವಿಮೆಯಲ್ಲಿ ನಮೂದಿಸಿರುತ್ತದೆ. ದಿ.27/01/2023ರಂದು ಸಾಯಂಕಾಲ ಸುಮಾರು 7.30 ಘಂಟೆಗೆ ಕಾರು ರಿಲಾಯನ್ಸ್ ಡಿಜಿಟಲ್ ಶೋ ರೂಮ್ ವಿಧ್ಯಾನಗರಹುಬ್ಬಳ್ಳಿಯಲ್ಲಿಚಲಿಸದೇನಿಂತುಆಗ ದೂರುದಾರರು ವಾಹನದಿಂದ ಕೆಳಗೆ ಇಳಿದು ನೋಡಿದಾಗ ವಾಹನದ ಬೋನೆಟ್‌ನಲ್ಲಿ ಹೊಗೆ ಕಾಣಿಸಿ ನಂತರ ಕಾರಿನ ಇಂಜಿನ್ ಮತ್ತು ಮುಂದಿನ ಭಾಗದ ಟಯರ್‌ಗಳು ಹಾಗೂ ಸಿಟ್‌ಗಳು ಪೂರ್ತಿಯಾಗಿ ಸುಟ್ಟು ರೂ.3 ಲಕ್ಷ ಹಾನಿಯಾಗಿರುತ್ತದೆ. ಈ ಸಂಗತಿಯನ್ನು ದೂರುದಾರರು ವಿದ್ಯಾನಗರ ಪೋಲೀಸ್ ಸ್ಟೇಶನಲ್ಲಿ ದೂರನ್ನು ಸಲ್ಲಿಸಿ ಮತ್ತು ಎದುರುದಾರರಿಗೂ ಸಹ ವಿಷಯವನ್ನು ತಿಳಿಸಿರುತ್ತಾರೆ. ದೂರುದಾರರ ಸರ್ವೇಯರ್ ಆ ವಾಹನವನ್ನು ಪರಿಶೀಲಿಸಿದರೂ ಅದರ ಬಗ್ಗೆ ವಿವರಣೆಯನ್ನು ಕೊಟ್ಟಿರುವುದಿಲ್ಲ. ಈ ಎಲ್ಲ ಸಂಗತಿಗಳನ್ನು ದೂರುದಾರರು ಎದುರುದಾರರಲ್ಲಿ ಸಾಕಷ್ಟು ಸಲ ವಿಚಾರಿಸಿ ತಮ್ಮ ವಿಮಾ ಪಾಲಿಸಿಯಲ್ಲಿ ನಮೂದಿಸಿದ IDVಹಣವನ್ನುಪಾವತಿಸುವಂತೆಕೇಳಿದರೂ ಸಹ ಎದುರುದಾರರು ಅವರ ಅಹಲನ್ನು ನಿರಾಕರಿಸಿ ವಿಮಾಕಂಪನಿಯವರು ತನಗೆ ಸೇವಾ ನ್ಯೂನ್ಯತೆ ಎಸಗಿದ್ದಾರೆ ಅಂತಾ ಹೇಳಿ ಅವರ ಮೇಲೆ ಕ್ರಮಕೈಗೊಂಡು ಪರಿಹಾರ ಕೊಡಿಸುವಂತೆ ದೂರುದಾರರು ದಿ.12/09/2023 ರಂದು ಗ್ರಾಹಕರ ರಕ್ಷಣಾ ಕಾಯ್ದೆ ಅಡಿ ಧಾರವಾಡ ಜಿಲ್ಲಾಗ್ರಾಹಕರ ಆಯೋಗಕ್ಕೆ ದೂರನ್ನು ಸಲ್ಲಿಸಿದ್ದರು.

ಸದರಿ ದೂರಿನ ಬಗ್ಗೆ ಕೂಲಂಕುಷವಾಗಿ ವಿಚಾರಣೆ ನಡೆಸಿದ ಆಯೋಗ ಅಧ್ಯಕ್ಷರಾದ ಶ್ರೀ. ಈಶಪ್ಪ. ಭೂತೆ ಹಾಗೂ ಶ್ರೀಮತಿ. ವಿಶಾಲಾಕ್ಷಿ. ಅ. ಬೋಳಶೆಟ್ಟಿ ಮತ್ತು ಶ್ರೀ. ಪ್ರಭು. ಸಿ.ಹಿರೇಮಠಸದಸ್ಯರು,ದೂರುದಾರರಮತ್ತು ಎದುರುದಾರರ ಎಲ್ಲ ಸಾಕ್ಷಾಧಾರಗಳನ್ನು ಅವಲೋಕಿಸಿದಾಗದೂರುದಾರರವಾಹನದ ಇಂಜಿನಿಗೆಬೆಂಕಿಹತ್ತಿರುವುದುಉಭಯತರರು ಒಪ್ಪಿತವಿಷಯವಾಗಿದೆ.ವಿಮಾಪಾಲಿಸಿಯನ್ನು ಅವಲೋಕಿಸಿದಾಗ ಅದರಲ್ಲಿ ಖಆಗಿ ಬೆಲೆ ರೂ.2,09,400/– ನಮೂದಿಸಿರುವುದು ಕಂಡು ಬರುತ್ತದೆ. ಅಲ್ಲದೆ ಪಾಲಿಸಿಯಲ್ಲಿ ಸಾಲವೇಜ ಬಗ್ಗೆ ನಮೂದಿಸಿರುವುದರಿಂದ ಅದನ್ನು ಕಳೆದು ದೂರುದಾರನು ರೂ.2 ಲಕ್ಷ ಪಡೆಯಲು ಅರ್ಹನಿರುವನೆಂದು ಆಯೋಗ ಅಭಿಪ್ರಾಯ ಪಟ್ಟು ಆದೇಶ ನೀಡಿದೆ. ಅಲ್ಲದೆ ದೂರುದಾರರಿಗೆ ಆಗಿರುವ ಮಾನಸಿಕ ತೊಂದರೆ ಹಾಗೂ ಅನಾನುಕೂಲಕ್ಕಾಗಿ ರೂ.50 ಸಾವಿರ ಪರಿಹಾರ ಮತ್ತು ರೂ.10 ಸಾವಿರ ಪ್ರಕರಣದ ಖರ್ಚು ವೆಚ್ಚವನ್ನು ಕೊಡುವಂತೆ ಎದುರುದಾರ ರಿಲಾಯನ್ಸ್ ಜನರಲ್ ಇನ್ಸುರೆನ್ಸ್ ವಿಮಾ ಕಂಪನಿಗೆ ಆಯೋಗ ಆದೇಶಿಸಿದೆ.

## ಅಂದ ಹಾಗೂ ಶ್ರವಣದೋಷವುಳ್ಳ ಮಕ್ಕಳ ಶಿಕ್ಷಣ ಕ್ಷೇತ್ರದಲ್ಲಿ ಡಿಪ್ಲೋಮೊ ಇನ್ ಸ್ಪೇಷಲ್ ಎಜ್ಯುಕೇಷನ್, ಹೆಚ್.ಐ ಹಾಗೂ ವಿ.ಐ ನ ತರಬೇತಿಗಾಗಿ ಅರ್ಜಿ ಆಹ್ವಾನ

**ಧಾರವಾಡ :** ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ವತಿಯಿಂದ ಮೈಸೂರಿನ ಸರ್ಕಾರಿ ಅಂದ ಮಕ್ಕಳ ಪಾಠಶಾಲೆಯ ಆವರಣದಲ್ಲಿ ಕಳೆದ 24 ವರ್ಷಗಳಿಂದಲೂ ಅಂದ ಹಾಗೂ ಶ್ರವಣದೋಷವುಳ್ಳ ಮಕ್ಕಳ ಶಿಕ್ಷಣ ಕ್ಷೇತ್ರದಲ್ಲಿ ಡಿಪ್ಲೋಮೊ ಇನ್ ಸ್ಪೇಷಲ್ ಎಜ್ಯುಕೇಷನ್ (ಹೆಚ್.ಐ) ಹಾಗೂ (ವಿ.ಐ)ನ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ಜೂನ್ 10, 2024 ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ವೆಬ್‌ಸೈಟ್ https://mysore.nic.in/en/ ಮತ್ತು ಉಪನ್ಯಾಸಕರಾದ ಅಂದ ಮಕ್ಕಳ ಶಿಕ್ಷಕರ ವಿಭಾಗದ ಟಿ.ಡಿ.ಮಂಜುನಾಥ–9686762378 ಹಾಗೂ ಶ್ರವಣದೋಷವುಳ್ಳ ಮಕ್ಕಳ ಶಿಕ್ಷಕರ ವಿಭಾಗದ ಆಶಾ.ವಿ.ಹಿರೇಮಠ–9113561620 ಅವರನ್ನು ಸಂಪರ್ಕಿಸಬಹುದು ಎಂದು ಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪ್ರಾಂಶುಪಾಲರು ಹೊಸ ಕೌಶಲಗಳನ್ನು ಅಳವಡಿಸಿಕೊಳ್ಳಬೇಕು: ಪ್ರೊ.ಸಿ.ಎಂ ತ್ಯಾಗರಾಜ



**ವಿಜಯಪುರ :** ಮಹಾವಿದ್ಯಾಲಯದ ಪ್ರಾಂಶುಪಾಲರುಗಳು ಕಲಿಕೆಯಲ್ಲಿ ತಮ್ಮ ಮಹಾವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳ ಭವಿಷ್ಯಕ್ಕೆ ಉಪಯುಕ್ತವಾಗುವಂತಹ, ಹೊಸ ಹೊಸ ಕೌಶಲ್ಯ ಅಭಿವೃದ್ಧಿಗಳ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡು ವಿದ್ಯಾರ್ಥಿಗಳಿಗೆ ಸಲಹೆ ಮಾರ್ಗದರ್ಶನ ನೀಡಬೇಕು ಎಂದು ರಾಣಿಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿಯ ಕುಲಪತಿಗಳಾದ ಪ್ರೊ. ಸಿ. ಎಂ. ತ್ಯಾಗರಾಜ ಹೇಳಿದರು.

ಅವರು ಗುರುವಾರ

ಹಾಗೂ ಬಿ.ಎಲ್.ಡಿ.ಇ ಸಂಸ್ಥೆಯ ಆವರಣದಲ್ಲಿರುವ ಡಾ.ಫ.ಗು. ಹಳಕಟ್ಟಿ ಇಂಜನೀಯರಿಂಗ್ ಮಹಾವಿದ್ಯಾಲಯದ ಸಭಾಂಗಣದಲಿ "Navigating Youth Towards AmruthaKal: Knowledge Transfer Through Technology and Skill Development" ಎಂಬ ವಿಷಯದಕುರಿತ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

ಕುಲಸಚಿವರಾದ ರಾಜಶ್ರೀ ಜೈನಾಪೂರ ಮಾತನಾಡಿ, ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಹೆಚ್ಚನ ಅಂಕ ಗಳಿಸುವದಕ್ಕಿಂತಲೂ ತಮ್ಮ ಜೀವನಕ್ಕೆ ಉಪಯುಕ್ತವಾಗುವ ಕೌಶಲಗಳನ್ನು ಕಲಿಯಲು ಪ್ರಯತ್ನಿಸಬೇಕು ಎಂದು ಹೇಳಿದರು.

ಈ ಕಾರ್ಯಾಗಾರದಲ್ಲಿ ಮೂರು ಗೋಷ್ಠಿಗಳನ್ನು ಹಮ್ಮಿಕೊಳ್ಳಲಾಗಿತ್ತು. ಮೊದಲನೇ ಗೋಷ್ಠಿಯನ್ನು ಶ್ರೀನಿವಾಸ ಪಿ, ಅವರು "RevolutionisingArtificalInteligence in Knowledge Transfer" ಎಂಬ ವಿಷಯದ ಬಗ್ಗೆ, ಎರಡನೇ ಗೋಷ್ಠಿಯನ್ನು ಐಐಟಿ ದೆಹಲಿಯ ಡಿಎಸ್. ಮಂಜುನಾಥ ಅವರು "ToC Critical Chain-Theory of Constriants Tools Industry 4.0 ∑Innovation" ಎಂಬ ವಿಷಯದ ಕುರಿತು, ಮೂರನೇಯ ಗೋಷ್ಠಿಯನ್ನು ಆರ್ ಕೆ ಇಂಡಸ್ಟ್ರೀಸ್‌ನ ನಿರ್ದೇಶಕರಾದ ಸೂರಜ ನಾಡಿಗ "Empowering Institutions through Skill Development and Entrepreneurship" ಎಂಬ ವಿಷಯದ ಕುರಿತು ಉಪನ್ಯಾನ ನೀಡಿದರು.

ಉಪ ಕುಲಸಚಿವರಾದ ಡಾ.ಡಿ. ಕೆ ಕಾಂಬಳೆ, ಬಿಎಲ್‌ಡಿಇ ಸಂಸ್ಥೆಯ ಪ್ರಾಂಶುಪಾಲ ವಿ. ಜಿ ಸಂಗಮ ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಪ್ರೊ.ಎಸ್ ಎಂ. ಗಂಗಾಧರಯ್ಯ ಸ್ವಾಗತಿಸಿದರು. ಸ್ನಾತಕೋತ್ತರಕೇಂದ್ರ ವಿಜಯಪುರದ ನಿರ್ದೇಶಕರಾದ ಡಾ.ದಯಾನಂದ ಸಾವಕಾರ, ವಂದಿಸಿದರು. ಡಾ.ಪೂರ್ಣಿಮಾ ದಾಮನ್ನವರ ಹಾಗೂ ಡಾ.ರೂಪಾ ಇಂಗಳೆ ಕಾರ್ಯಕ್ರಮವನ್ನು ನಿರೂಪಿಸಿದರು. ಕುಮಾರಿ.ವೈಷ್ಣವಿ ನಾಗರಾಳ ಹಾಗೂ ಶ್ರೀರಕ್ಷಾ ಕುಲಕರ್ಣಿ ಗೋಷ್ಠಿಗಳನ್ನು ನಿರ್ವಹಿಸಿದರು.

## ಬೆಳಗಾವಿಯ ಚಿದಂಬರ ನಗರದಲ್ಲಿ 24*7 ನಳ ಸಂಪರ್ಕ ಪಡೆಯಲು ದಾಖಲಾತಿ ಸಂಗ್ರಹ ಅಭಿಯಾನ




**ಬೆಳಗಾವಿ :** ಬೆಳಗಾವಿ ದಕ್ಷಿಣ ವಲಯದ ಚಿದಂಬರ ನಗರದಲ್ಲಿ 24*7 ನಳ ಸಂಪರ್ಕ ಪಡೆಯಲು ದಾಖಲಾತಿ ಸಂಗ್ರಹ ಅಭಿಯಾನವನ್ನು ಚಿದಂಬರ ದೇವಸ್ಥಾನದಲ್ಲಿ ಇತ್ತೀಚಿಗೆ ಕೆಯುಐಡಿಎಫ್‌ಸಿ ಯೋಜನಾ ಅನುಷ್ಠಾನಘಟಕ,ಅಡವಿಸಿದ್ದೇಶ್ವರ ನೆರವುಸಂಸ್ಥೆ,ಎಲ್&ಟಿಯೋಜನೆ ನಿರ್ವಾಹಕರ ಸಂಯುಕ್ತ ಆಶ್ರಯದಲ್ಲಿ ದಾಖಲಾತಿ ಸಂಗ್ರಹ ಅಭಿಯಾನವನ್ನು ಹಮ್ಮಿಕೊಳ್ಳಲಾಗಿತ್ತು.

ಇದಕ್ಕೂ ಪೂರ್ವದಲ್ಲಿ, ನೆರವು ಸಂಸ್ಥೆಯ ಸಿಬ್ಬಂದಿಗಳು ಚಿದಂಬರ ನಗರದ ಪ್ರತಿ ಮನೆ ಮನೆಗೂ ಬೇಟಿ ನೀಡಿ ಅವರ ಮನೆಗೆ 24*7 ನಳಸಂಪರ್ಕ ಪಡೆಯಲು ಅವಶ್ಯಕವಿರುವ ದಾಖಲಾತಿಗಳಾದ ಆಧಾರ ಕಾರ್ಡ್, ಇತ್ತೀಚಿನ ನೀರಿನ ದರ ಪಾವತಿ ರಶೀದಿ, 100 ರೂಗಳ ಬಾಂಡ್ ಪೇಪರ್, 2 ಪಾಸ್‌ಪೋರ್ಟ್ ಸೈಜ್ ಪೋಟೋಗಳನ್ನು ಒಂದು ಪೈಲಿನಲ್ಲಿಮೇ.13ರಂದುನಡೆಸುವ ದಾಖಲಾತಿ ಅಭಿಯಾನದಲ್ಲಿ ಸಲ್ಲಿಸಲು ತಿಳಿಸಲಾಗಿತ್ತು.

ಮೇ.13 ಬೆಳಗ್ಗೆ 10 ಗಂಟೆಯಿಂದ ಸಂಜೆ 5:30 ರವರೆಗೆ ಚಿದಂಬರ ನಗರದ ನಿವಾಸಿಗಳೆಲ್ಲ ಬಂದು ತಮ್ಮ ದಾಖಲಾತಿಗಳನ್ನು ಸಲ್ಲಿಸಿದರು. ಇದ್ದರಲ್ಲಿ ಹೆಸರು ಬದಲಾವಣೆ ಕೋರಿ ಹಲವರು ದಾಖಲೆ ಸಲ್ಲಿಸಿದರು. ಒಟ್ಟು 315 ಜನರು ದಾಖಲೆಗಳನ್ನು ಸಲ್ಲಿಸಿದ್ದರು. ಅಲ್ಲದೇ 38 ಜನರು ನೀರಿನ ಕರ ಪಾವತಿಸಿದರು. ಒಟ್ಟು 57,064 ರೂಗಳನ್ನು ಕೂಡಾ ಸಂಗ್ರಹಿಸಲಾಯಿತು. ಈ ಅಭಿಯಾನದಿಂದ ನಮಗೆ ಕಚೇರಿ ಅಲೆಯುವುದನ್ನು ತಪ್ಪಿತ್ತು. ಕಚೇ–ರಿಯೇ ನಮ್ಮ ಮನೆ ಬಾಗಿಲಿಗೆ ಬಂದು ನಮ್ಮ ಸಮಸ್ಯೆಗಳನ್ನು ನೀವಾರಿಸಿದಂತಾಯಿತು. ಸ್ಥಳದಲ್ಲೇ ಬಾಂಡ್ ಪೇಪರ್ ಪ್ರಿಂಟ್ ಮಾಡಿಕೊಟ್ಟಿದ್ದು, ತುಂಬಾ ಒಳ್ಳೆಯದಾಯಿತು ಎಂದು ಚಿದಂಬರ ನಗರದ ನಿವಾಸಿಗಳು ಸಂತಸ ವ್ಯಕ್ತಪಡಿಸಿದರು.

ಅಭಿಯಾನದಲ್ಲಿ ಕೆಯುಐಡಿಎಫ್‌ಸಿ ಯೋಜನಾ ಅನುಷ್ಠಾನ ಘಟಕದ ಅಧೀಕ್ಷಕ ಅಭಿಯಂತರಾದ ಅಶೋಕ ಬುರಕುಲೆ, ಶಶಿಕುಮಾರ ಹತ್ತಿ, ಉಮೇಶ ನಿಟ್ಟೂರಕರ, ಶ್ರೀಮತಿ ಸೌಮ್ಯ, ಪ್ರಕಾಶ ಕೋಷ್ಠಿ, ಸಂತೋಷ ಕಾವಿ, ಶ್ರೀಮತಿ ಪದ್ಮಜಾ ನಾಡಗೌಡ, ನೆರವು ಸಂಸ್ಥೆಯ ತಂಡದ ಶ್ರೀಮತಿ ಚಂದ್ರಲೇಖ ಮಾನು ಮತ್ತು ಸಿಬ್ಬಂದಿಗಳು, ಎಲ್ & ಟಿ ಸಮಾಜಿಕ ತಂಡದ ದೊಡ್ಡಮನಿ ಭೀಮಪ್ಪ, ಇಬ್ರಾಹಿಂ ಅವರು ಉಪಸ್ಥಿತರಿದ್ದು ಸಾರ್ವಜನಿಕರಿಗೆ ಸೂಕ್ತ ಮಾರ್ಗದರ್ಶನ ನೀಡಿದ್ದರು.

## ಸಮೃದ್ಧ ಬಾಳಿಗೆ ರೇಣುಕಾಚಾರ್ಯರ ಚಿಂತನಗಳು ದಾರಿದೀಪ: ಶ್ರೀ ರಂಭಾಪುರಿ ಜಗದ್ಗುರುಗಳು



**ಕಾಳಗಿ :** ಬದುಕು ಭಗವಂತ ಕೊಟ್ಟ ಅಮೂಲ್ಯ ಕೊಡುಗೆ. ಅರಿವು ಆದರ್ಶಗಳ ಮೂಲಕ ಬದುಕನ್ನು ಕಟ್ಟಿಕೊಳ್ಳಬೇಕಾಗಿದೆ. ಜೀವನ ಉನ್ನತಿಗೆ ಶ್ರೀ ಜಗದ್ಗುರು ರೇಣುಕಾಚಾರ್ಯರ ಚಿಂತನಗಳು ಸಕಲರ ಬಾಳಿಗೂ ದಾರಿದೀಪ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಶುಕ್ರವಾರ ಕಾಳಗಿ ಶ್ರೀ ನೀಲಕಂಠ ಕಾಳೇಶ್ವರ ಕಲ್ಯಾಣ ಮಂಟಪದಲ್ಲಿ ಜರುಗಿದ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಬಾಳಿನ ಭಾಗ್ಯೋದಯಕ್ಕೆ ಧರ್ಮವೇ ದಿಕ್ಸೂಚಿ. ಧರ್ಮದ ದಾರಿ ಮೀರಿ ನಡೆದರೆ ಅಪಾಯ ತಪ್ಪಿದ್ದಲ್ಲ. ಶ್ರೀ ಜಗದ್ಗುರು ರೇಣುಕಾಚಾರ್ಯರು ಕರ್ಮವನ್ನು ಕಳೆದು ಧರ್ಮವನ್ನು ಬಿತ್ತಿ ಬದುಕನ್ನು ಬಂಗಾರಗೊಳಿಸಿದ ಕೀರ್ತಿ ಅವರದು. ನೊಂದವರ ಬೆಂದವರ ಧ್ವನಿಯಾಗಿ ಧಾರ್ಮಿಕ ಮತ್ತು ಸಾಮಾಜಿಕ ಸತ್ಕ್ರಾಂತಿಗೈದು ಜನ ಕಲ್ಯಾಣವನ್ನು ಉಂಟು ಮಾಡಿದ್ದನ್ನು ಮರೆಯಲಾಗದು. ಅಸ್ಪೃಶ್ಯರ ಉದ್ಧಾರ, ಮಹಿಳೆಯರಿಗೆ ಧಾರ್ಮಿಕ ಸ್ವಾತಂತ್ರ್ಯ ರೈತ ಸಮುದಾಯದ ಹಿತಕ್ಕಾಗಿ ಸದಾ ಶ್ರಮಿಸಿ ಜೀವ ಸಂಕುಲವನ್ನು ಸಂರಕ್ಷಿಸಿದ್ದಾರೆ. ದೇಶಕ್ಕೊಂದು ಸಂವಿಧಾನ ಇರುವಂತೆ ಧರ್ಮಕ್ಕೊಂದು ನೀತಿ ಸಂಹಿತೆಯಿದೆ. ಅಷ್ಟಾವರಣ, ಪಂಚಾಚಾರ ಮತ್ತು ಷಟ್ಸ್ಥಲಗಳು ಜೀವನದ ಉನ್ನತಿಗೆ ಅಡಿಪಾಯವಾಗಿವೆ. ಅಂಥ ತತ್ವ ಸಿದ್ಧಾಂತಗಳನ್ನು ಅರಿತು ಬಾಳುವುದರಲ್ಲಿ ಮಾನವನ ಶ್ರೇಯಸ್ಸಿದೆ. ಕಾಳಗಿ ತಾಲೂಕಾ ಕೇಂದ್ರದಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಭಕ್ತಿ ಶ್ರದೆಯಿಂದ ಭವ್ಯ ಸಮಾರಂಭ ಹಮ್ಮಿಕೊಂಡಿರುವುದು ಸಂತೋಷ ತಂದಿದೆ ಎಂದರು.

ಚಿಂಚೋಳಿ ಶಾಸಕ ಡಾ.ಅವಿನಾಶ ಜಾಧವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ ಪ್ರತಿಯೊಬ್ಬರಿಗೂ ಧರ್ಮ ಬೇಕಾಗಿದೆ. ಅಶಾಂತಿ ಅಜ್ಞಾನದಿಂದ ತತ್ತರಿಸುತ್ತಿರುವ ಜನ ಸಮುದಾಯಕ್ಕೆ ಧರ್ಮವೊಂದೇ ಆಶಾಕಿರಣ. ವೀರಶೈವ ಧರ್ಮ ಆದರ್ಶ ಮೌಲ್ಯಗಳನ್ನು ಪ್ರತಿಪಾದಿಸಿದೆ. ಶ್ರೀ ಜಗದ್ಗುರು ರೇಣುಕಾಚಾರ್ಯರ ವಿಚಾರ ಧಾರೆಗಳು ಸರ್ವ ಕಾಲಕ್ಕೂ ಅನ್ವಯವಾಗುತ್ತವೆ ಎಂದರು. ನೇತೃತ್ವ ವಹಿಸಿದ ಹೊನ್ನಕಿರಣಗಿ ಚಂದ್ರಗುಂಡ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ ಕಾಳಗಿ ಪಟ್ಟಣದ ಇತಿಹಾಸದಲ್ಲಿ ಇದು ಅವಿಸ್ಮರಣೀವಾದ ಸಮಾರಂಭ. ಪ್ರಪ್ರಥಮವಾಗಿ ಶ್ರೀ ರಂಭಾಪುರಿ ಜಗದ್ಗುರುಗಳು ಆಗಮಿಸಿರುವುದು ಈ ಭಾಗದ ಭಕ್ತರ ಸೌಭಾಗ್ಯವೆಂದರು.

ಈ ಪವಿತ್ರ ಸಮಾರಂಭದಲ್ಲಿ ಭರತನೂರ ಚಿಕ್ಕಗುರುನಂಜೇಶ್ವರ ಸ್ವಾಮಿಗಳು, ಮಂಗಲಗಿ ತೆಂಗಳಿ ಶಾಂತಸೋಮನಾಥ ಶಿವಾಚಾರ್ಯರು, ಹೊಸಳ್ಳಿ ಸಿದ್ಧಲಿಂಗ ಶಿವಾಚಾರ್ಯರು, ರಟಕಲ್ ರೇವಣಸಿದ್ಧ ಶಿವಾಚಾರ್ಯರು, ಬಣಮಗಿ ರಾಚೋಟೇಶ್ವರ ಶಿವಾಚಾರ್ಯರು, ಡೊಣ್ಣೂರ ಪ್ರಶಾಂತ ದೇವರು, ಕಾಳಗಿ ನೀಲಕಂಠ ಮರಿದೇವರು ಉಪಸ್ಥಿತರಿದ್ದರು. ಸ್ವಾಗತ ಸಮಿತಿ ಗೌರವಾಧ್ಯಕ್ಷ ಶಿವರಾಜ ಪಾಟೀಲ ಗೋಣಗಿ, ಸ್ವಾಗತ ಸಮಿತಿ ಅಧ್ಯಕ್ಷ ನಾಗರಾಜ ಚಿಕ್ಕಮಠ, ಪ್ರಚಾರ ಸಮಿತಿ ಅಧ್ಯಕ್ಷ ಮಲ್ಲಿನಾಥ ಪಾಟೀಲ, ಕಲಬುರ್ಗಿ ಶಿವಶರಣಪ್ಪ ಸೀರಿ ಮೊದಲಾದ ಗಣ್ಯರು ಪಾಲ್ಗೊಂಡು ಶ್ರೀ ರಂಭಾಪುರಿ ಜಗದ್ಗುರುಗಳಿಂದ ಗುರುರಕ್ಷೆ ಸ್ವೀಕರಿಸಿದರು. ಭಕ್ತ ಕುಂಬಾರ ಸಮಾರಂಭವನ್ನು ನಿರೂಪಿಸಿದರು.

ಸಮಾರಂಭಕ್ಕೂ ಮುನ್ನ ಕಾಳಗಿ ಪಟ್ಟಣದಲ್ಲಿ ಬಾಳೆಹೊನ್ನೂರು ಶ್ರೀ ರಂಭಾಪುರಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವ ಸಂಭ್ರಮದಿಂದ ಜರುಗಿ–ತು. ಇತಿಹಾಸ ಪ್ರಸಿದ್ಧ ಪ್ರಾಚೀನ ಶ್ರೀ ನೀಲಕಂಠ ಕಾಳೇಶ್ವರ ದೇವಸ್ಥಾನಕ್ಕೆ ಶ್ರೀ ರಂಭಾಪುರಿ ಜಗದ್ಗುರುಗಳು ಭೇಟಿಯಿತ್ತು ಪುಷ್ಪಾರ್ಚನೆ ಪೂಜೆ ಸಲ್ಲಿಸಿದರು. ಆಗಮಿಸಿದ ಸಕಲ ಸದ್ಭಕ್ತರಿಗೂ ಅನ್ನ ದಾಸೋಹ ಜರುಗಿತು.

## ಬಾಲಕೀಯರ ಪದವಿ ಪೂರ್ವ ವಸತಿ ಶಾಲೆಗಳಿಗೆ ಅರ್ಜಿ ಆಹ್ವಾನ

**ಬೆಳಗಾವಿ :** 2024–25ನೇ ಸಾಲಿಗೆ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಬೆಳಗಾವಿ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಬಾಲಕೀಯರ ವಸತಿ ಪದವಿ ಪೂರ್ವ ಕಾಲೇಜು, ಡಾ॥ ಎಪಿಜೆ ಅಬ್ದುಲ್ ಕಲಾಂ ವಸತಿ ಕಾಲೇಜುಗಳು–ಶಾಲೆಗಳು, ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ (ಉನ್ನತೀಕರಣಗೊಂಡ) ಶಾಲೆಗಳಲ್ಲಿ ಪ್ರವೇಶ ನೀಡಲು ಎಸ್.ಎಸ್.ಎಲ್.ಸಿ ಉತ್ತೀರ್ಣರಾದ ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಪೋಷಕರು ಅಥವಾ ವಿದ್ಯಾರ್ಥಿಗಳು ಮೇ.27 ಒಳಗಾಗಿ ಎಲ್ಲಾ ಪೂರಕ ದಾಖಲೆಗಳೊಂದಿಗೆ ತಮಗೆ ಹತ್ತಿರವಿರುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಬಾಲಕೀಯರ ಪದವಿ ಪೂರ್ವ ವಸತಿ ಕಾಲೇಜು, ಡಾ.ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಕಾಲೇಜು/ಶಾಲೆಗಳು ಹಾಗೂ ಜಿಲ್ಲಾ/ತಾಲ್ಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರವನ್ನು ಸಂಪರ್ಕಿಸಬಹುದಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿಗಳಾದ ಡಾ. ಅಬ್ದುಲ್‌ರಶೀದ ಮಿರ್ಜನ್ನವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

